ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 134 RNI Number : KNKAN/25/A2770 23-05-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :134 ರಾಯಚೂರು 23-05-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಆಳಂದ ಗಲಭೆ ಪ್ರಕರಣ ಕೈಬಿಡುವ ಸರ್ಕಾರದ ತೀರ್ಮಾನಕ್ಕೆ ಬಿಜೆಪಿ ನಾಯಕರ ಆಕ್ರೋಶ

ಬೆಂಗಳೂರು/ಹುಬ್ಬಳ್ಳಿ: ಆಳಂದ ಗಲಭೆ ಸಂಬಂಧ ಪ್ರಕರಣ ಕೈಬಿಡುವ ಸಚಿವ ಸಂಪುಟ ಸಭೆಯ ತೀರ್ಮಾನದ ಬಗ್ಗೆ ರಾಜ್ಯ ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಎಕ್ಸ್ ಪೋಸ್ಟ್ ಮಾಡಿ, ನಾಚಿಕೆಗೆಟ್ಟ ಕಾಂಗ್ರೆಸ್ ಸರ್ಕಾರದ ವೋಟ್ ಬ್ಯಾಂಕ್ ಓಲೈಕೆಯ ಕೀಳು ರಾಜಕೀಯ ಮತ್ತು ಅಲ್ಪಸಂಖ್ಯಾತರ ತುಷ್ಟೀಕರಣದ ಪರಮಾವಧಿಯ ನಿರ್ಲಜ್ಜ ಪ್ರದರ್ಶನಕ್ಕೆ ರಾಜ್ಯ ಈಗ ಸಾಕ್ಷಿಯಾಗಿದೆ. ಕನಿಷ್ಠ ಜವಾಬ್ದಾರಿಯೂ ಇಲ್ಲದೆ, ನೈತಿಕತೆ, ಗೌರವಗಳೆಲ್ಲವನ್ನೂ ಗಾಳಿಗೆ ತೂರಿ, ಸಭ್ಯತೆಯ ಎಲ್ಲಾ ಮಿತಿಗಳನ್ನೂ ಈ ತುಘಲಕ್ ಕಾಂಗ್ರೆಸ್ ಸರ್ಕಾರ ದಾಟಿದೆ ಎಂದು ಟೀಕಿಸಿದ್ದಾರೆ.

ಶಾಸಕ ಸುನಿಲ್ ಕುಮಾರ್ ಪ್ರತಿಕ್ರಿಯಿಸಿ, ರಾಜ್ಯದಲ್ಲಿ ರೈತಪರ, ಕನ್ನಡಪರ, ದಲಿತರಪರ, ಜನಪರ ಹೋರಾಟ ಬಂದಾಗ ಅವರ ಕೇಸ್ ವಾಪಸ್ ತೆಗೆದುಕೊಳ್ಳುವುದೆಲ್ಲಾ ಸರ್ಕಾರ ಮಾಡಿದೆ. ಈ ರೀತಿ ಕೇಸ್ ವಾಪಸ್ ತೆಗೆದುಕೊಳ್ಳುವುದನ್ನು ಸಮರ್ಥಿಸುತ್ತೇನೆ. ಆದರೆ, ಕೇಸ್ ವಾಪಸ್ ತೆಗೆದುಕೊಂಡಿರುವುದು ಯಾವ ಪುರುಷಾರ್ಥಕ್ಕೆ?. ಇದರಿಂದ ಯಾವ ಸಂದೇಶ ಕೊಡಲು ಹೊರಟಿದ್ದಾರೆ. ಯಾರು ಗಲಭೆ ಉದ್ದೇಶಕ್ಕೆ ಅಂತ ಮಾಡಿದ್ದಾರೆ ಅವರ ಕೇಸ್ ವಾಪಸ್ ತೆಗೆದುಕೊಂಡಿರುವುದು ಸರಿಯಲ್ಲ. ಓಲೈಕೆ ರಾಜಕಾರಣಕ್ಕೆ ಇತಿಮಿತಿ ಇದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಕಾಂಗ್ರೆಸ್ ಸರ್ಕಾರವು ಕನ್ನಡಪರ ಹೋರಾಟಗಾರರ ಕೇಸ್ ಮುಂದಿಟ್ಟುಕೊಂಡು ಕೋಮು ಗಲಭೆಕೋರರ ಖುಲಾಸೆಗೆ ಮುಂದಾಗಿದ್ದು, ತುಷ್ಟೀಕರಣಕ್ಕಾಗಿ ಶ್ರೇಷ್ಠ ಸಂವಿಧಾನ ಮತ್ತು ದೇಶದ ಕಾನೂನನ್ನೇ ಬಲಿ ಕೊಡುತ್ತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಕಿಡಿ ಕಾರಿದ್ದಾರೆ.

ಇದನ್ನೆಲ್ಲಾ ನೋಡಿದರೆ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕಾನೂನು ರಕ್ಷಕರಿಗೆ ರಕ್ಷಣೆ ಇಲ್ಲದಾಗಿದೆ ಎಂಬುದು ಸ್ಪಷ್ಟ. ಗಲಭೆಕೋರರನ್ನು ಸರ್ಕಾರ ಸನ್ಮಾನದ ರೀತಿಯಲ್ಲಿ ಬಿಡುಗಡೆ ಮಾಡುತ್ತಿರುವುದು ನಿಜಕ್ಕೂ ದುರಂತ ಎಂದು ಖಂಡಿಸಿದ್ದಾರೆ.

ರೈತರು, ಕನ್ನಡಪರ ಹೋರಾಟಗಾರರ ಪ್ರತಿಭಟನೆ ಪ್ರಕರಣಗಳ ಜೊತೆ ಈ ಗಲಭೆಕೋರರ ಕೇಸ್‌ಗಳನ್ನೂ ಸೇರಿಸಿ ಹಿಂಪಡೆದು ಜನರ ಕಣ್ಣಿಗೆ ಮಣ್ಣೆರಚಲು ಯತ್ನಿಸಿದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗಲಭೆಕೋರರ ರಕ್ಷಣೆಯೇ ಮುಖ್ಯವಾಯಿತೇ?: ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಕಾನೂನು ಪಾಲಿಸುವ ಸಾರ್ವಜನಿಕರ ರಕ್ಷಣೆಗಿಂತ ರಾಹುಲ್ ಗಾಂಧಿ ಮತ್ತು ಗಲಭೆಕೋರರ ಓಲೈಕೆಯೇ ಮುಖ್ಯವಾಯಿತೇ? ಎಂದು ಪ್ರಶ್ನಿಸಿರುವ ಜೋಶಿ, ಇದು ತುಷ್ಟೀಕರಣದ ಪರಮಾವಧಿ. ಕರ್ತವ್ಯ ನಿರತ ಪೊಲೀಸರಿಗೇ ರಕ್ಷಣೆ ಇಲ್ಲದಿದ್ದರೆ ಹೇಗೆ? ಇನ್ನು, ರಾಜ್ಯದ ಕಾನೂನು ಸುವ್ಯವಸ್ಥೆ ಗತಿಯೇನು? ಎಂದು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ
ರಿಪೋರ್ಟರ್ಸ್ ಗಿಲ್ಡ್‌ನಿಂದ 5 ಸಾವಿರ ನಗದು ಬಹುಮಾನ

ರಾಯಚೂರು, ಮೇ.22-

ಪತ್ರಕರ್ತರ ಮಕ್ಕಳಿಗೆ ಶಿಕ್ಷಣದಲ್ಲಿ ಪ್ರೋತ್ಸಾಹ ನೀಡಲು ಪತ್ರಕರ್ತರ ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ರಾಯಚೂರು ಪ್ರಭಾ ಪತ್ರಿಕೆಯ ಸಂಪಾದಕರಾದ ಸುಶೀಲೇಂದ್ರ ಸೋದೆಗಾರ ಸಲಹೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ರಿಪೋರ್ಟರ್ಸ್ ಗಿಲ್ಡ್ ವತಿಯಿಂದ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಧ್ಯಮ ವರ್ಗದ ಕುಟುಂಬಗಳಿಂದ ಅನೇಕ ಪತ್ರಕರ್ತರು ಬಂದಿರುವುದರಿಂದ ಮಕ್ಕಳ ಶಿಕ್ಷಣ ಶುಲ್ಕ ಪಾವತಿಸುವಷ್ಟು ಆರ್ಥಿಕ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲ. ಆದ್ದರಿಂದ ಪತ್ರಕರ್ತರ ಮಕ್ಕಳಿಗೆ ಶಿಕ್ಷಣ ನೆರವು, ವಿದ್ಯಾರ್ಥಿವೇತನ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸರ್ಕಾರದಿಂದ ದೊರಕಿಸಿಕೊಡಲು ಸಂಘಟನೆಗಳು ಒಟ್ಟಾಗಿ ಹೋರಾಡಬೇಕು ಎಂದು ಹೇಳಿದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ₹5 ಸಾವಿರ ನಗದು ಬಹುಮಾನ ನೀಡುತ್ತಿರುವ ಗಿಲ್ಡ್ ಕಾರ್ಯವನ್ನು ಶ್ಲಾಘಿಸಿದರು.

ರಿಪೋರ್ಟರ್ಸ್ ಗಿಲ್ಡ್ ಸದಸ್ಯ ಕೆ. ಸತ್ಯನಾರಾಯಣ ಮಾತನಾಡಿ, ಸಮಾಜದ ಸಮಸ್ಯೆಗಳಿಗೆ ಪರಿಹಾರ



ಹುಡುಕುವ ಜವಾಬ್ದಾರಿಯ ಜೊತೆಗೆ ಪತ್ರಕರ್ತರು ಕುಟುಂಬ ನಿರ್ವಹಣೆಯ ಹೊಣೆಗಾರಿಕೆಯನ್ನು ಸಹ ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ ಎಂದರು.

ಗಿಲ್ಡ್‌ನ ಅನೇಕ ಕಾರ್ಯಕ್ರಮಗಳ ನಡುವೆ ಮಕ್ಕಳ ಪ್ರತಿಭೆ ಗುರುತಿಸುವ ಕಾರ್ಯಕ್ರಮ ವಿಶೇಷವಾಗಿದೆ. ಪಾಲಕರ ವೃತ್ತಿಯಿಂದ ಸಮಾಜದಲ್ಲಿ ಸಿಗುವ ಗೌರವ ಮಕ್ಕಳಿಗೂ ಪ್ರೇರಣೆಯಾಗಬೇಕು. ಮುಂದಿನ ದಿನಗಳಲ್ಲಿ ಮಕ್ಕಳಿಗೆ ಇನ್ನಷ್ಟು ಪೂರಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಸಂಪಾದಕರ ಸಂಘದ ಅಧ್ಯಕ್ಷ ಚನ್ನಬಸವ ಬಾಗಲವಾಡ ಮಾತನಾಡಿ, ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಪತ್ರಕರ್ತರ ಮಕ್ಕಳಿಗೆ ಸನ್ಮಾನ ಹಾಗೂ ಗೌರವ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಪತ್ರಿಕಾ ಭವನದ ನವೀಕರಣ ಕಾಮಗಾರಿ, ಕ್ಯಾಂಟಿನ್, ವಿಮೆ ಹಾಗೂ ಮೃತ ಪತ್ರಕರ್ತರ ಕುಟುಂಬಗಳಿಗೆ ನೆರವು ಸೇರಿದಂತೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಸಂಘದಿಂದ ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪತ್ರಕರ್ತರ ಮಕ್ಕಳಲ್ಲಿ ಅತಿ ಹೆಚ್ಚು ಅಂಕ ಪಡೆದ ಟಾಪರ್ ವಿದ್ಯಾರ್ಥಿಗೆ ₹10 ಸಾವಿರ ಪ್ರೋತ್ಸಾಹಧನ ನೀಡಲಾಗುವುದು ಎಂದು ಘೋಷಿಸಿದರು.

3 ನೇ ಪುಟಕ್ಕೆ

ಪೆಟ್ರೋಲ್ ಕೊರತೆ ಆತಂಕ : ಲಿಂಗಸುಗೂರಿನಲ್ಲಿ ಬಂಕ್‌ಗಳ ಮುಂದೆ ವಾಹನಗಳ ಸಾಲು



ಲಿಂಗಸುಗೂರು : ಮಧ್ಯಪ್ರಾಚ್ಯ ರಾಷ್ಟ್ರಗಳ ಯುದ್ಧದ ಪರಿಣಾಮ ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಉಂಟಾಗಲಿದ್ದು, ಇಂಧನ ದರ ಏರಿಕೆಯಾಗಲಿದೆ ಎಂಬ ಸುಳ್ಳು ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಹಿನ್ನೆಲೆ ವಾಹನ ಸವಾರರು ಪೆಟ್ರೋಲ್ ಬಂಕ್‌ಗಳತ್ತ ಮುಗಿಬಿದ್ದ ಘಟನೆ ಲಿಂಗಸುಗೂರು ಪಟ್ಟಣದಲ್ಲಿ ಕಂಡುಬಂದಿದೆ.

ಪಟ್ಟಣದ ಬಸ್ ನಿಲ್ದಾಣದ ಸಮೀಪದ ಪೆಟ್ರೋಲ್ ಬಂಕ್‌ನಲ್ಲಿ ಸಂಜೆ ವೇಳೆಯಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕ್ಯಾನ್‌ಗಳನ್ನು ಹಿಡಿದು ಸರದಿ ಸಾಲಿನಲ್ಲಿ ನಿಂತು ಪೆಟ್ರೋಲ್ ಹಾಗೂ ಡೀಸೆಲ್ ತುಂಬಿಸಿಕೊಳ್ಳಲು ಹರಸಾಹಸಪಟ್ಟರು.

ಸುಳ್ಳು ಸುದ್ದಿಯನ್ನು ನಂಬಿದ ಹಲವರು 2ರಿಂದ 3 ಕ್ಯಾನ್‌ಗಳನ್ನು ಹಿಡಿದುಕೊಂಡು ಗಂಟೆಗಟ್ಟಲೆ ಬಂಕ್ ಮುಂದೆ ಕಾಯುತ್ತಿದ್ದು, ಇದರಿಂದ ಬಂಕ್ ಸಿಬ್ಬಂದಿಗೆ ಜನರನ್ನು ನಿಯಂತ್ರಿಸುವುದು ಕಷ್ಟಕರವಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಆಹಾರ ನಿರೀಕ್ಷಕ ರಾಮಕೃಷ್ಣ, ಜಿಲ್ಲಾಡಳಿತದ ಸ್ಪಷ್ಟ ಆದೇಶದಂತೆ ಕ್ಯಾನ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತುಂಬಿಸಬಾರದು. ಈ ಬಗ್ಗೆ ಬಂಕ್ ಮಾಲೀಕರಿಗೆ ಸೂಚನೆ ನೀಡಲಾಗುವುದು. ನಿಯಮ ಉಲ್ಲಂಘಿಸಿದರೆ ತಹಶೀಲ್ದಾರರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದ್ದಾರೆ.

ಭ್ರಷ್ಟರ ರಕ್ಷಣೆಗೆ ನಿಂತ ಸಿಇಒ - ವಿಶ್ವನಾಥ್ ಬಲ್ಲಿದವ್ ಆರೋಪ

ದೇವದುರ್ಗ:- ಪಟ್ಟಣದ ತಾಲೂಕು ಪಂಚಾಯಿತಿಯಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಅಣ್ಣಾರಾವ್ ಎಂಬುವವರು ಇಲಾಖೆಗೆ ವಂಚಿಸಿ ಭ್ರಷ್ಟಚಾರ ಎಸಗಿದ್ದು ಸಾಭಿತಾದರು ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ್ ಕಾಂದೂ ಅವರು ಮಾತ್ರ ಆಯುಕ್ತರ ಆದೇಶದಂತೆ ಸೇವೆಯಿಂದ ವಜಾಗೊಳಿಸದೇ ಕೇವಲ ಹಣ ವಸೂಲಿ ಮಾಡುವಂತೆ ಸೂಚಿಸಿರೋದು ಆಯುಕ್ತರ ಆದೇಶಕ್ಕೆ ತದ್ವಿರುದ್ದವಿದ್ದು ಸಿಇಒ ಅವರ ಮೇಲೆ ಕ್ರಮ ಜರುಗಿಸುವಂತೆ ಆಗ್ರಹಿಸಿ ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಭೀಮ್ ಆರ್ಮಿ ತಾಲೂಕು ಅಧ್ಯಕ್ಷರಾದ ವಿಶ್ವನಾಥ್ ಬಲ್ಲಿದವ್ ದೂರು ನೀಡಿದ್ದರು.



ಶಾಖವಾದಿ ಗ್ರಾಮ ಪಂಚಾಯಿತಿಯಲ್ಲಿ 70 ಲಕ್ಷಕ್ಕೂ ಹೆಚ್ಚು, ದೇವದುರ್ಗ ತಾಲೂಕಿನಲ್ಲಿ ಸಹಾಯಕ ನಿರ್ದೇಶಕರಾದ ನಂತರ 16 ಲಕ್ಷ ಭ್ರಷ್ಟಚಾರ ಎಸಗಿದ್ದಾರೆಂದು ಸಾಭಿತಾಗಿದೆ. ಹಣ ವಸೂಲಿಯ ಜೊತೆಗೆ ಸೇವೆಯಿಂದ ವಜಾಗೊಳಿಸಬೇಕೆಂದು ಆಯುಕ್ತರೇ ಆದೇಶ ಮಾಡಿದ್ದರು ಯಾವ ಕಾರಣಕ್ಕೆ 10 ತಿಂಗಳ ನಂತರ ಕೇವಲ ಹಣ ವಸೂಲಿಗೆ ಸಿಇಒ ಅವರ ಸೂಚನೆ ನೀಡಿದ್ದಾರೆ. ಅಣ್ಣಾರಾವ್ ನಿಂದ ಹಣ ಪಡೆದು ಈ ವರ್ತನೆ ತೀರುತಿದ್ದಾರಾ ಎಂಬ ಅನುಮಾನಗಳು ಕಾಡುತ್ತಿವೆ. ಅಲ್ಲದೇ ಜಿಲ್ಲಾ ಪಂಚಾಯಿತಿ ಪಿಡಿ ಶರಣ ಬಸವರಾಜ ಅವರನ್ನು ಕಮೀಷನ್ ಪಡೆಯೋದಕ್ಕೆ, ಭ್ರಷ್ಟರ ರಕ್ಷಣೆಗೆ ಇಟ್ಟುಕೊಂಡಂತಿದೆ. ಸುಮಾರು 15-16 ವರ್ಷಗಳಿಂದ ಶರಣ ಬಸವರಾಜ ಅವರ ಮಾತ್ರ ಇಲಾಖೆಯಾದ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಗೆ ಕಳುಹಿಸದೇ ಜಿಲ್ಲಾ ಪಂಚಾಯಿತಿಯಲ್ಲಿ ಯಾವ ಕಾರಣಕ್ಕೆ ಇರಿಸಿಕೊಳ್ಳಲಾಗಿದೆ ಎಂದು ಆಯುಕ್ತರ ಆದೇಶದಂತೆ ಅಣ್ಣಾರಾವ್ ನನ್ನು ಸೇವೆಯಿಂದ ವಜಾಮಾಡುವಂತೆ, ಪಿಡಿ ಶರಣ ಬಸವರಾಜ ಅವರನ್ನು

3 ನೇ ಪುಟಕ್ಕೆ

ರಿಮ್ಸ್ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗಾಗಿ ವಿಶ್ರಾಂತಿ -ಭೋಜನ ಕೊಠಡಿ ಲೋಕಾರ್ಪಣೆ
ರೋಗಿಗಳು, ಕುಟುಂಬಸ್ಥರಿಗೆ ಅನುಕೂಲ ಕಲ್ಪಿಸಿದ ರಿಮ್ಸ್ ಆಡಳಿತ



ರಾಯಚೂರು,ಮೇ.22-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್) ಬೋಧಕ ಆಸ್ಪತ್ರೆಯ ''ಬಿ'' ಬ್ಲಾಕ್‌ನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾದ ವಿಶ್ರಾಂತಿ ಹಾಗೂ ಭೋಜನ ಕೊಠಡಿಯನ್ನು ಬುಧವಾರ ಲೋಕಾರ್ಪಣೆ ಮಾಡಲಾಯಿತು.

ರಿಮ್ಸ್ ಸಂಸ್ಥೆಯ ನಿರ್ದೇಶಕರು ನೂತನ ವ್ಯವಸ್ಥೆಯನ್ನು ಉದ್ಘಾಟಿಸಿ ಸಾರ್ವಜನಿಕ ಬಳಕೆಗೆ ಸಮರ್ಪಿಸಿದರು. ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿಗಳು, ವೈದ್ಯಕೀಯ ಸಿಬ್ಬಂದಿ ಹಾಗೂ ವಿವಿಧ ವಿಭಾಗಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಆಸ್ಪತ್ರೆಗೆ ಚಿಕಿತ್ಸೆ ಗಾಗಿ ಆಗಮಿಸುವ ರೋಗಿಗಳು ಮತ್ತು ಅವರ ಕುಟುಂಬಸ್ಥರಿಗೆ ಆರಾಮದಾಯಕ ವ್ಯವಸ್ಥೆ ಒದಗಿಸುವ ಉದ್ದೇಶದಿಂದ ಈ ವಿಶ್ರಾಂತಿ ಭೋಜನ ಕೊಠಡಿಯನ್ನು ನಿರ್ಮಿಸಲಾಗಿದೆ. ಸಾರ್ವಜನಿಕರು ಸ್ವಚ್ಛ ವಾತಾವರಣದಲ್ಲಿ ವಿಶ್ರಾಂತಿ ಪಡೆಯಲು ಹಾಗೂ ಭೋಜನ ಮಾಡಲು ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ ಎಂದು ಆಸ್ಪತ್ರೆ ಆಡಳಿತ ತಿಳಿಸಿದೆ.

3 ನೇ ಪುಟಕ್ಕೆ

ಸರ್ಕಾರಿ ಜಾಗ ಕಬಳಿಕೆ ಯತ್ನ; ಕ್ರಮಕ್ಕೆ ದಲಿತ ಸಂಘಟನೆಗಳ ಒತ್ತಾಯ

ಸಿರವಾರ,ಮೇ.22-

ಪಟ್ಟಣದ ಮುಖ್ಯ ರಸ್ತೆಯ ಪಕ್ಕದ ತುಂಗಭದ್ರಾ ಡಿಸ್ಟ್ರಿಬ್ಯುಟರಿ ನಂಬರ್ 91 ಉಪ ಕಾಲುವೆಗೆ ಹೊಂದಿಕೊಂಡಿರುವ ಸರ್ಕಾರಿ ಜಾಗವನ್ನು ಖಾಸಗಿ ವ್ಯಕ್ತಿಗಳು ಕಬಳಿಸಲು ಯತ್ನಿಸುತ್ತಿದ್ದು, ಅದನ್ನು ತಪ್ಪಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದಿಂದ ಆಗ್ರಹಿಸಲಾಯಿತು.

ಡಿಸ್ಟ್ರಿಬ್ಯುಟರಿ ನಂಬರ್ 91 ಉಪ ಕಾಲುವೆ ಪಕ್ಕ ತಾಯಮ್ಮ ದೇವಿ ದೇವಸ್ಥಾನಕ್ಕೆ ಹೋಗುವ ರಸ್ತೆಗೆ ಹೊಂದಿಕೊಂಡಿರುವ ಸುಮಾರು 30 40 ಅಡಿ ವಿಸ್ತೀರ್ಣದ ಸಾರ್ವಜನಿಕ ಜಾಗದಲ್ಲಿ ಕಳೆದ ಸುಮಾರು 30 ವರ್ಷಗಳಿಂದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಡಾ. ಎನ್. ಮೂರ್ತಿ ಸ್ಥಾಪಿತ ಬಣ ಸೇರಿದಂತೆ ವಿವಿಧ ದಲಿತ ಸಂಘಟನೆಗಳು



ಕಚೇರಿಯನ್ನು ಮಾಡಿಕೊಂಡು ಸಾರ್ವಜನಿಕರ ಹಿತರಕ್ಷಣೆಗಾಗಿ ಹೋರಾಡುತ್ತಾ ಬಂದಿರುತ್ತವೆ.

ಸದರಿ ಜಾಗದಲ್ಲಿ ಮುಂದಿನ ದಿನಗಳಲ್ಲಿ ಮಾನ್ಯ ಶಾಸಕರು ಸಂಸದರು ಅಥವಾ ಸರ್ಕಾರದ ವಿವಿಧ ಇಲಾಖೆಗಳಿಂದ ಅನುದಾನವನ್ನು ಮಂಜೂರು ಮಾಡಿಸಿ, ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಂದು 'ಸಮುದಾಯ ಭವನ' ಹಾಗೂ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಡಿಜಿಟಲ್ ಗ್ರಂಥಾಲಯ ಸ್ಥಾಪಿಸಬೇಕೆಂಬ ಉದಾತ್ತ ಆಶಯವನ್ನು ಒಕ್ಕೂಟ ಹೊಂದಿದೆ.

ಸರ್ಕಾರಿ ಜಾಗವನ್ನು ವೈಯಕ್ತಿಕ ಲಾಭಕ್ಕಾಗಿ ಅಕ್ರಮವಾಗಿ ಖಾತೆ ಬದಲಾವಣೆ (ಮ್ಯುಟೇಷನ್) ಹಾಗೂ ನೋಂದಣಿ ಮಾಡಿಕೊಳ್ಳಲು ಮುಂದಾಗಿದ್ದು ಅದನ್ನು ಮಾಡಿಕೊಳ್ಳದಂತೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

ಪರಭಾರೆ ಮಾಡಲು ಯತ್ನಿಸಿದರೆ, ಮುಂಬರುವ ದಿನಗಳಲ್ಲಿ ಸಮಸ್ತ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಉಗ್ರವಾದ ಕಾನೂನಾತ್ಮಕ ಹೋರಾಟ ಹಾಗೂ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಈ ಮೂಲಕ ಎಚ್ಚರಿಸಲಾಗುತ್ತಿದೆ ಎಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದಿಂದ ಸಿರವಾರ ತಹಶೀಲ್ದಾರ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಬಸವರಾಜ ಭಂಡಾರಿ.

3 ನೇ ಪುಟಕ್ಕೆ

ಮೇ 24 ರಂದು ಸಂಜೀವಿನಿ ಟ್ರಸ್ಟ ನಿಂದ ಹೃದಯ ರಕ್ಷಣೆ ಕಾರ್ಯಕ್ರಮ

ಸಿರವಾರ.ಮೇ.22-

ಇಂದಿನ ದಿನಮಾನಗಳಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ಎಲ್ಲಾ ವಯಸ್ಸಿನವರಿಗೆ ಹೃದಯಘಾತವು ಅತೀ ಹೆಚ್ಚು ಪ್ರಮಾಣದಲ್ಲಿ ಸಂಭವಿಸುತ್ತದೆ. ಇದಕ್ಕೆಲ್ಲಾ ಕಾರಣ ಏನು ? ಮತ್ತು ಇದಕ್ಕೆ ಪರಿಹಾರ ಏನು ?

ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒಪೆಕ್ ಆಸ್ಪತ್ರೆಯ ಹಿರಿಯ ಹೃದಯ ರೋಗ ತಜ್ಞರಾದ ಡಾ ಸುರೇಶ ಸಗರದ ಅವರು ಹೃದಯ ರಕ್ಷಣೆ ಕಾರ್ಯಕ್ರಮದಲ್ಲಿ ಪ್ರೋಜೆಕ್ಟರ್ ಮುಖಾಂತರ ಸೂಕ್ತ ಮಾಹಿತಿಯನ್ನು ಮೇ 24 ಭಾನುವಾರದಂದು ಸಿರವಾರ ಪಟ್ಟಣದ ಸರಕಾರಿ ಬಾಲಕರ ಉನ್ನತೀಕರಿಸಿದ ಶಾಲೆಯಲ್ಲಿ ಸಂಜೆ 05:00 ಕಾರ್ಯಕ್ರಮದಲ್ಲಿ ತಿಳಿಸಲಿದ್ದಾರೆ. ಸಾನಿಧ್ಯವನ್ನು

ನವಲಕಲ್ ಬೃಹನ್ಮಠದ ಷಬ್ರ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು,

ಪೂಜ್ಯ ಜ್ಯೋತಿ ಅಕ್ಕನವರು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯ, ಸಿರವಾರ. ಹಾಗೂ ರೆ ಸುಂದರರಾಜ್ ಸಾಮುವೇಲ್ ಜಿಲ್ಲಾ ಮೇಲ್ವಿಚಾರಕರು, ಮೇಥೋಡಿಸ್ಟ್ ಚರ್ಚ,ಖಾಜಿ ಮಹ್ಮದ್ ಮಂಜೂರುಲ್ ಹಸನ್ ಮುಸ್ಲಿಂ ಧರ್ಮಗುರುಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ.

ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಭೋಸರಾಜು ಉದ್ಘಾಟಿಸುವರು, ಮಾನವಿ ವಿಧಾನಸಭಾ ಕ್ಷೇತ್ರ ಶಾಸಕರಾದ ಜಿ. ಹಂಪಯ್ಯ ನಾಯಕ, ಅಧ್ಯಕ್ಷತೆ ವಹಿಸುವರು. ಅತಿಥಿಯಾಗಿ ಪ.ಪಂ ಅಧ್ಯಕ್ಷ ಹಾಜಿ ಚೌದ್ರಿ, ಉಪಾಧ್ಯಕ್ಷೆ ಲಕ್ಷ್ಮೀ ಆದೆಪ್ಪ ಸರ್ವ ಸದಸ್ಯರು ಭಾಗವಹಿಸುತ್ತಾರೆ. ಸಿರವಾರದ ಸಮಸ್ತ ನಾಗರೀಕರು ಮತ್ತು ಊರಿನ ಗಣ್ಯರು ಭಾಗವಹಿಸಿ ಸದುಪಯೋಗ ಪಡೆದುಕೊಳುವಂತೆ ಸಂಜೀವಿನಿ ಟ್ರಸ್ಟ್ ಅಧ್ಯಕ್ಷ ಜ್ಞಾನಮಿತ್ರ ತಿಳಿಸಿದ್ದಾರೆ

ವಿಶ್ವವಿದ್ಯಾಲಯಗಳು ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡಲು ಮುಂದಾಗಬೇಕು-ಡಿಸಿ ನಾಗೇಂದ್ರ ಪ್ರಸಾದ್



ಬಳ್ಳಾರಿ,ಮೇ 22-

ವಿಶ್ವವಿದ್ಯಾಲಯಗಳು ತಂತ್ರ ಜ್ಞಾನ ಆಧಾರಿತ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಜಿಲ್ಲಾಧಿ ಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರೊ.ಸಿದ್ದು.ಪಿ ಆಲಗೂರ ಸಭಾಂ ಗಣದಲ್ಲಿ ಆಯೋಜಿಸಿರುವ ಎರಡು ದಿನಗಳ ವಿಜ್ಞಾನ ಪ್ರದರ್ಶನ-2026 ಮೇಳಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಎಐ ಯುಗದಲ್ಲಿ ವಿಜ್ಞಾನವನ್ನು ಸ್ಥಳೀಯ ಭಾಷೆಯಲ್ಲಿ ಜನಸಾಮಾನ್ಯರಿಗೆ ತಲುಪುವ ಹಾಗೆ ರೂಪಾಂತರಗೊಳಿಸುವುದು ಅಗತ್ಯ ವಿದೆ. ಎಲ್ಲ ಕ್ಷೇತ್ರಗಳಲ್ಲೂ ತಂತ್ರಜ್ಞಾನ ಅವಶ್ಯಕವಾಗಿದೆ. ವಿವಿಗಳು ವಿನೂತನ ಮಾದರಿಯ ಗ್ರಂಥಾಲಯಗಳನ್ನು ಹೊಂದಬೇಕು. ಸಾಮಾನ್ಯ ವಿಜ್ಞಾನದ ಮಹತ್ವ ಕುರಿತು ಜನಸಾಮಾನ್ಯರಿಗೆ ಜ್ಞಾನ ಲಭಿಸಲು ದಾರಿದೀಪವಾಗ ಬೇಕು ಎಂದರು.

ತಂತ್ರಜ್ಞಾನ ಬದಲಾದಂತೆ ಪ್ರಾದೇಶಿಕ ವಾತಾವರಣವು ಬದಲಾ ಗುತ್ತದೆ ಎಂಬುದಕ್ಕೆ ನಮ್ಮ ಬಳ್ಳಾ ರಿಯೇ ಸ್ಪಷ್ಟ ನಿದರ್ಶನವಾಗಿದ್ದು, ಬಳ್ಳಾರಿಯು ಹಸಿರೀಕರಣಗೊಂಡಿ ರುವುದು ಇದಕ್ಕೆ ಸಾಕ್ಷಿಯಾಗಿದೆ. ವಿಶ್ವವಿದ್ಯಾಲಯಕ್ಕೆ ಅವಶ್ಯವಿರುವ ಗ್ರಂಥಾಲಯ ಹಾಗೂ ಇನ್ನಿತರ ಮೂಲ ಸೌಲಭ್ಯಗಳನ್ನು ಒದಗಿಸಲು ವಿಶೇಷ ಆಸಕ್ತಿ ವಹಿಸುವುದಾಗಿ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ವಿಜ್ಞಾನವು ಶೋಧನೆ ಮತ್ತು ಕ್ರಿಯಾತ್ಮಕ ವಿಚಾರಗಳಿಗೆ ವೇದಿಕೆಯಾಗಿದೆ. ವಿಜ್ಞಾನ ಬೆಳೆದಷ್ಟು ಸವಾಲುಗಳು ಸಾಕಷ್ಟು ಉದ್ಭವಿಸುತ್ತವೆ. ರಾಮನ್ ಪರಿಣಾಮವನ್ನು ಹಲವಾರು ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಬಳಸುತ್ತಿದ್ದೇವೆ. ಈ ನಿಟ್ಟಿನಲ್ಲಿ ಸಂಶೋ ಧನೆಗಳಲ್ಲಿ ಎಲ್ಲರೂ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಭಾಷಣಕಾರರಾಗಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ ಲೋಕನಾಥ್ ಅವರು ಮಾತನಾಡಿ, ಇಂದಿನ ದಿನಮಾನಗಳಲ್ಲಿ ಸ್ಮಾರ್ಟ್‌ಫೋನ್ ಗೀಳು ಬಿಟ್ಟು ಸ್ಮಾರ್ಟ್ (ಸ್ಪೆಸಿಫಿಕ್, ಮೆಸರೇಬಲ್, ಅಚಿವೇಬಲ್, ರಿಲೆ ವೆಂಟ್, ಟೈಮ್‌ಬಾಂಡ್) ಆಗಿ ಕಾರ್ಯನಿರ್ವಹಿಸಿದಲ್ಲಿ ಎಲ್ಲ ಕ್ಷೇತ್ರದ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಾಗುತ್ತದೆ ಎಂದು ಹೇಳಿದರು.

ವಿಜ್ಞಾನವು ವಿಶ್ವದಾದ್ಯಂತ ವ್ಯಾಪ ಕವಾಗಿ ಹರಡಿದೆ. ವಿದ್ಯಾರ್ಥಿಗಳು ತಮ್ಮಲ್ಲಿರುವ ನವೀನ ವಿಚಾರಧಾರೆ ಗಳನ್ನು ತಮ್ಮ ಸಂಶೋಧನೆಗಳಾಗಿ ಮಾರ್ಪಡಿಸಬೇಕು. ಈ ಮಾದ ರಿಯ ಮೇಳವು ವಿದ್ಯಾರ್ಥಿ ಹಾಗೂ ಶಿಕ್ಷಕರ ವೈಜ್ಞಾನಿಕ ಚಟುವಟಿಕೆಗಳನ್ನು ಅನಾವರಣಗೊಳಿಸುವ ಮೂಲಕ ಅವರಲ್ಲಿ ಹೊಸ ಆಸಕ್ತಿ, ಅನ್ವೇಷಣೆ ಹಾಗೂ ವಿಚಾರಗಳು ಆಳವಾಗಿ ಬೇರೂರುವಂತೆ ಮಾಡುತ್ತವೆ. ನೂತನ ಅನ್ವೇಷಣೆ, ಸಕಾರಾತ್ಮಕ ಚಿಂತನೆ ಮತ್ತು ಧನಾತ್ಮಕ ವಿಚಾರ ಗಳಿಗೆ ಮಾತ್ರ ವಿದ್ಯಾರ್ಥಿಗಳು ಗಮನ ಹರಿಸಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲ ಯದ ಕುಲಪತಿ ಪ್ರೊ.ಎಂ.ಮುನಿ ರಾಜು ಅವರು ಮಾತನಾಡಿ, ವೈಜ್ಞಾನಿಕ ಮೇಳಗಳು ವಿದ್ಯಾರ್ಥಿ ಗಳಲ್ಲಿ ಕಲಿಕಾ ವಾತಾವರಣವನ್ನು ಉತ್ತೇಜಿಸುತ್ತವೆ. ಸಂಶೋಧಕರು ಗಳು ಹೊಸ ಅನ್ವೇ ಷಣೆ ಹಾಗೂ ಜನಪರ ಅಭಿವೃದ್ಧಿ ಚಿಂತನೆಯುಕ್ತ ವೈಜ್ಞಾನಿಕ ವಿಚಾರ ಗಳನ್ನು ಹೆಚ್ಚಾಗಿ ಹೊರತರಬೇಕು ಎಂದರು.

ಕಾರ್ಯಕ್ರಮದಲ್ಲಿ ಅನ್ವಯಿಕ ವಿಜ್ಞಾನ ನಿಕಾಯದ ಡೀನ್ ಪ್ರೊ.ಹನುಮೇಶ ವೈದ್ಯ ಅವರ ಮಾರ್ಗದರ್ಶನದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಿಂದ ನಿರ್ಮಿತವಾದ ವೆಬ್‌ಸೈಟ್ ಮಾದರಿ (ಎಐ ಇಂಟಿಗ್ರೇಟೆಡ್ ಡೈನಾಮಿಕ ಮಾಡೆಲ್), ಬೆಸ್ಟ್ ಆಫ್ ಬಳ್ಳಾರಿ ಹಾಗೂ ಆಸ್ಕ ವಿಎಸ್‌ಕೆಯು (ವಿಎಸ್ ಕೆಯು ಚಾಟ್ ಜಿಪಿಟಿ) ಗಳನ್ನು ಗಣ್ಯರು ಅನಾವರಣಗೊಳಿಸಿದರು. ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಎನ್.ಎಂ ಸಾಲಿ, ವಿತ್ತಾಧಿಕಾರಿ ಸ್ಫೂರ್ತಿ ಕೆ.ಜಿ., ಶುದ್ಧ ವಿಜ್ಞಾನ ನಿಕಾಯದ ಡೀನ್ ಪ್ರೊ. ಉದಯ್ ಕುಮಾರ್ ಖಡ್ಕೆ, ಕಾರ್ಯ ಕ್ರಮದ ಸಹ ಸಂಚಾಲಕ ಡಾ.ಪಿ.ಶರತ್ ಕುಮಾರ ವೇದಿಕೆಯಲ್ಲಿದ್ದರು. ವಿವಿಧ ನಿಕಾಯಗಳ ಡೀನರು, ಎಲ್ಲ ವಿಜ್ಞಾನ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಕಾರ್ಯಕ್ರಮವನ್ನು ಡಾ.ಸಿದ್ದೇಶ್ವರಿ ನಿರೂಪಿಸಿದರು. ಕಾರ್ಯಕ್ರಮದ ಸಂಚಾಲಕ ಪ್ರೊ.ತಿಪ್ಪೇರುದ್ರಪ್ಪ ಜೆ., ಅತಿಥಿ ಗಳನ್ನು ಸ್ವಾಗತಿಸಿದರು. ವಿವಿಯ ಕುಲಸಚಿವ ಪ್ರೊ.ವಿ.ಲೋಕೇಶ ವಂದಿಸಿದರು.

ವೀಕ್ಷಣೆಗೆ ಮುಕ್ತ ಅವಕಾಶ: ವಿವಿಯ ಎಲ್ಲ ವಿಜ್ಞಾನ ವಿಭಾಗಗಳ ಸಂಶೋಧನಾ ವಿದ್ಯಾರ್ಥಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು ಸಿದ್ಧಪಡಿಸಿರುವ 100ಕ್ಕೂ ಅಧಿಕ ವೈವಿಧ್ಯಮಯ ವಿಜ್ಞಾನ ಪ್ರಯೋ ಗಗಳ ಪ್ರದರ್ಶನದ ಸಂಭ್ರಮಕ್ಕೆ ಸಾಕ್ಷಿಯಾಗಿವೆ. ವಿಜ್ಞಾನ ಪ್ರದರ್ಶನ ಮೇಳ ಶುಕ್ರವಾರವೂ ಮುಂದುವ ರೆಯುವುದರಿಂದ ಆಸಕ್ತರು, ವಿದ್ಯಾ ರ್ಥಿಗಳು, ಸಾರ್ವಜನಿಕರು ಮುಕ್ತ ವಾಗಿ ಮೇಳ ವೀಕ್ಷಿಸಬಹುದಾಗಿದೆ.



ರೈಲ್ವೆ ಕೆಳ ಸೇತುವೆ ನಿರ್ಮಾಣಕ್ಕಾಗಿ ಸ್ಥಳ ಪರಿಶೀಲನೆ ಎಂಟು ತಿಂಗಳಲ್ಲಿ ಕಾಮಗಾರಿ ಪ್ರಾರಂಭ

ಬೀದರ್,ಮೇ.22-

ನಗರದ ಹಳೆ ಆದರ್ಶ ಕಾಲೋನಿ ನ್ಯಾಶನಲ್ ಕಾಲೇಜು ಹತ್ತಿರ ರೈಲ್ವೆ ಕೆಳ ಸೇತುವೆ ನಿರ್ಮಾಣ ಕಾರ್ಯಕ್ಕಾಗಿ ಗುರುವಾರ ಸಂಸದ ಸಾಗರ ಈಶ್ವರ ಖಂಡ್ರೆ ಅವರು ಜಿಲ್ಲಾಧಿಕಾರಿ, ರೈಲ್ವೆ ಇಲಾಖೆ ಅಧಿಕಾರಿ, ಏರ್ಪೋರ್ಸ್ ಅಧಿಕಾರಿ ಹಾಗೂ ಪುರಾತತ್ವ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿದರು .

ಈ ಸಮಯದಲ್ಲಿ ಸಂಸದರು ಅಧಿಕಾರಿಗಳೊಂದಿಗೆ ರೈಲ್ವೆ ಕೆಳ ಸೇತುವೆ ನಿರ್ಮಾಣದ ಸಾಧಕ-ಬಾದ ಕಗಳ ಬಗ್ಗೆ ಸಮಾಲೋಚನೆ ನಡೆಸಿ ದರು. ನಂತರ ಮಾತನಾಡಿದ ಅವರು, ಹಳೆ ಆದರ್ಶ ಕಾಲೋನಿ ಬಳಿ ರೈಲ್ವೆ ಕೆಳ ಸೇತುವೆ ನಿರ್ಮಾಣ ಮಾಡಬೇಕು ಎಂಬುದು ಜನರ ಬಹುದಿನಗಳ ಬೇಡಿಕೆಯಾಗಿತ್ತು. ಆದರೆ ಕೆಲವು ಸಮಸ್ಯೆಗಳ ಕಾರಣದಿಂದಾಗಿ ತೊಡಕಾಗಿತ್ತು, ನಿರಂತರ ಮೇಲ್ವಿಚಾರಣೆ ನಡೆಸಿ ಸಮಸ್ಯೆಗನ್ನು ಪರೇಹರಿಸಿ ಇಂದು ವಾಯುಪಡೆ, ರೈಲ್ವೆ ಹಾಗೂ ಪುರಾತತ್ವ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿ ಸಮೀಕ್ಷೆ ನಡೆಸಿದ್ದೇನೆ.

ಸೇತುವೆ ನಿರ್ಮಾಣಕ್ಕೆ ವಾಯು ಪಡೆಯ 0.33, ಖಾಸಗಿಯ 0.33 ಎಕರೆ ಜಾಗ ಬೇಕಾಗುವ ನಿರೀಕ್ಷೆ ಇದೇ. ವಾಯು ಪಡೆಯ ಅಧಿಕಾರಿ ಗಳು ಈಗಾಗಲೇ ತಾವು ನಮಗೆ ಪ್ರಸ್ತಾ ವನೆ ಸಲ್ಲಿಸಿದಲ್ಲಿ ರಕ್ಷಣಾ ಸಚಿವಾಲ ಯದಿಂದ ಅನುಮೋದನೆ ಕೊಡಿಸು ವುದಾಗಿ ಭರವಸೆ ನೀಡಿದ್ದಾರೆ.

ಸ್ಮಾರಕಗಳು ಇರುವುದರಿಂದ ಪುರಾತತ್ವ ಇಲಾಖೆಯವರು ಸಹ ಸಹಕಾರ ನೀಡಿ ಅನುಮತಿ ಕೊಡಿಸುವುದಾಗಿ ತಿಳಿಸಿದ್ದಾರೆ. ಈಗಾಗಲೇ ಪ್ರಾಥಮಿಕ ವರದಿ ಸಿದ್ದವಾಗಿದೆ. ಅಧಿಕಾರಿಗಳು ರೂಟ್ ಅಲೈನ್ ಮೆಂಟ್ ಫಿಕ್ಸ್ ಮಾಡುತ್ತಿದ್ದಾರೆ. ಒಂದು ತಿಂಗಳಲ್ಲಿ ವಿಸ್ತೃತ ವರದಿ ತಯ್ಯಾರಿಸಿ ಸಂಬಂದಿ ಸಿದ ಇಲಾಖೆಗಳಿಂದ ಎನ್.ಓ.ಸಿ ಪಡೆದು 8 ರಿಂದ 9 ತಿಂಗಳಲ್ಲಿ ಟೆಂಡರ್ ಕರೆದು ಕಾಮಗಾರಿ ಪ್ರಾರಂ ಭಿಸಲಾಗುವುದು. ಈ ರೈಲ್ವೆ ಕೆಳ ಸೇತುವೆ ನಿರ್ಮಾಣದಿಂದ ಟ್ರಾಫಿಕ್ ಸಮಸ್ಯೆ ನಿವಾರಣೆಯಾಗಿ ಜನರಿಗೆ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್, ರೈಲ್ವೆ ಇಲಾಖೆ, ವಾಯುಪಡೆ ಹಾಗೂ ಪುರಾತತ್ವ ಇಲಾಖೆಯ ಅಧಿಕಾರಿಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿ ದ್ದರು.

ಬಳ್ಳಾರಿ: ಎಲ್ಲಾ ಸಂಸ್ಥೆಗಳಲ್ಲಿ ಆಂತರಿಕ ದೂರು ನಿವಾರಣಾ ಸಮಿತಿ ರಚನೆ ಕಡ್ಡಾಯ: ತಪ್ಪಿದರೆ ರೂ.50 ಸಾವಿರ ದಂಡ, ಲೈಸೆನ್ಸ್ ರದ್ದು

ಬಳ್ಳಾರಿ,ಮೇ 22-

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ 2013ರನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅವುಗಳ ಅಧೀನ ಕಚೇರಿಗಳಲ್ಲಿ ಆಂತರಿಕ ದೂರು ನಿವಾರಣಾ ಸಮಿತಿಗಳನ್ನು ಕಡ್ಡಾಯವಾಗಿ ರಚಿಸಬೇಕು. ಸಮಿತಿಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ ಅವರು ತಿಳಿಸಿದ್ದಾರೆ.

ಯಾವುದೇ ಸರ್ಕಾರಿ ಕಚೇರಿ, ಖಾಸಗಿ ಸಂಸ್ಥೆ, ಕಾರ್ಖಾನೆ, ಶಾಲಾ-ಕಾಲೇಜುಗಳಲ್ಲಿ 10 ಅಥವಾ 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರೆ, ಅಂತಹ ಕಡೆಗಳಲ್ಲಿ ಆಂತರಿಕ ದೂರು ನಿವಾರಣಾ ಸಮಿತಿಯನ್ನು ರಚಿಸುವುದು ಅತ್ಯಗತ್ಯವಾಗಿದೆ. ಈ ಕುರಿತು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಇದು ಆಯಾ ಕಚೇರಿಗಳ ಮುಖ್ಯಸ್ಥರ ಪ್ರಮುಖ ಜವಾಬ್ದಾರಿಯಾಗಿದೆ.

ಜಿಲ್ಲೆಯಾದ್ಯಂತ ಇರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಕಚೇರಿಗಳು, ನಿಗಮ ಮಂಡಳಿಗಳು, ಸಾರ್ವಜನಿಕ ಉದ್ದಿಮೆಗಳು, ಕಾರ್ಖಾನೆಗಳು, ಗಾರ್ಮೆಂಟ್ಸ್ , ವಿಶ್ವವಿದ್ಯಾನಿಲಯಗಳು, ಶಾಲಾ-ಕಾಲೇಜುಗಳು, ಸಂಘ-ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು, ಅಂಚೆ ಕಚೇರಿಗಳು, ಹೋಟೆ ಲ್‌ಗಳು, ರೆಸ್ಟೋರೆಂಟ್ ಗಳು, ಮಾಲ್‌ಗಳು, ಆಭರಣ ಮಳಿಗೆಗಳು, ಬ್ಯಾಂಕ್‌ಗಳು ಈ ಎಲ್ಲೆಡೆ ಕಾರ್ಯನಿರ್ವಹಿಸುವ ಮಹಿಳಾ ಅಧಿಕಾರಿ ಮತ್ತು ಸಿಬ್ಬಂದಿಯ ಮೇಲಿನ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಮತ್ತು ಸ್ವೀಕೃತ ದೂರುಗಳನ್ನು ಪರಿಹರಿಸಲು ಕೇಂದ್ರ ಸರ್ಕಾರವು 2013ರ ಅಧಿನಿಯಮವನ್ನು ಜಾರಿಗೆ ತಂದಿದೆ.

ಔಪಚಾರಿಕ-ಅನೌಪಚಾರಿಕ ಹಾಗೂ ಸಂಘಟಿತ-ಅಸಂಘಟಿತ ವಲಯದ ಮಹಿಳಾ ನೌಕರರಿಗೆ ಸುರಕ್ಷಿತ ವಾತಾವರಣ ನಿರ್ಮಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಹಾಗಾಗಿ ಜೂನ್ 9ರ ಒಳಗಾಗಿ ಈ ಕುರಿತಾದ ಮಾಹಿತಿಯನ್ನು ಕೇಂದ್ರ ಸರ್ಕಾರದ 'ಶೀ-ಬಾಕ್ಸ್' ಪೋರ್ಟಲ್‌ನಲ್ಲಿ ನೋಂದಣಿ ಮಾಡದಿದ್ದರೆ ರೂ.50,000 ದಂಡ ವಿಧಿಸುವುದರ ಜೊತೆಗೆ, ಖಾಸಗಿ ಕಚೇರಿಗಳ ಪರವಾನಗಿ (ಲೈಸೆನ್ಸ್) ರದ್ದುಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ಸಮಿತಿಯ ರಚನೆ ಹೇಗಿರಬೇಕು?: ಪ್ರತಿಯೊಂದು ಸಂಸ್ಥೆಯ ಆಂತರಿಕ ದೂರು ಸಮಿತಿಯಲ್ಲಿ ಈ ಕೆಳಗಿನ ಸದಸ್ಯರಿರಬೇಕು. ಅಧ್ಯಕ್ಷೆಯಾಗಿ ಸಂಸ್ಥೆಯ ಹಿರಿಯ ಮಹಿಳಾ ಉದ್ಯೋಗಿ, ಸದಸ್ಯರು (ಇಬ್ಬರು)- ಮಹಿಳಾ ಕಲ್ಯಾಣ, ಸಾಮಾಜಿಕ ಜಾಗೃತಿ ಅಥವಾ ಕಾನೂನು ಜ್ಞಾನ ಹೊಂದಿರುವ ಸಿಬ್ಬಂದಿ. ಹೊರಗಿನ ಸದಸ್ಯರು (ಒಬ್ಬರು)- ಮಹಿಳಾ ಹಕ್ಕುಗಳು ಅಥವಾ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಅನುಭವವಿರುವ ಎನ್‌ಜಿಒ ಪ್ರತಿನಿಧಿ ಅಥವಾ ತಜ್ಞರು ಇರಬೇಕು. ಈ ಕುರಿತಾದ ಸಮಗ್ರ ವರದಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಬೇಕಾಗಿರುವುದರಿಂದ, ಜೂನ್ 9ರ ಒಳಗಾಗಿ ಎಲ್ಲಾ ಸಂಸ್ಥೆಗಳು ಕಡ್ಡಾಯವಾಗಿ ಆನ್‌ಲೈನ್ ನೋಂದಣಿ ಮಾಡಿಕೊಳ್ಳಬೇಕು.

ಖಾಸಗಿ ಕಚೇರಿಗಳ ಮೊದಲ ಹಂತದ ನೋಂದಣಿಗೆ (https://shebox.wcd.gov.in/registerOffices) ಗೆ ಭೇಟಿ ನೀಡಬಹುದು ಹಾಗೂ ಸಮಿತಿಯ ವಿವರಗಳನ್ನು ಅಪ್‌ಲೋಡ್ ಮಾಡಲು (https://shebox. wcd. gov.in/signin) ಗೆ ಆನ್ ಲೈನ್ ವೆಬ್ ಸೈಟ್ ಗೆ ವೀಕ್ಷಿಸಬ ಹುದು.

ಈಗಾಗಲೇ ಸಮಿತಿ ರಚನೆಯಾಗಿದ್ದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕಾಲಮಿತಿಯೊಳಗೆ ಇತ್ಯರ್ಥಪಡಿಸಬೇಕು. ಹೊಸದಾಗಿ ಸಮಿತಿ ರಚಿಸದ ಹಾಗೂ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಲೋಡ್ ಮಾಡದ ಸಂಸ್ಥೆಗಳ ವಿರುದ್ಧ ಲೈಂಗಿಕ ಕಿರುಕುಳ ತಡೆ ಕಾಯ್ದೆ 2013ರ ಸೆಕ್ಷನ್ 26 (1)ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ಮೊ.73539 01862 ಅನ್ನು ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಿ

ತ್ಯಾಜ್ಯ ಸಂಸ್ಕರಿಸಿ ನೀಡದಿದ್ದರೆ ನೀರು, ವಿದ್ಯುತ್ ಕಟ್: ಡಿಸಿ

ಕೊಪ್ಪಳ,ಮೇ.22-

ಸುಪ್ರೀಂ ಕೋರ್ಟ್‌ನ ಆದೇಶದನುಸಾರ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತು ವಿಲೇವಾರಿಗೆ ಸೂಕ್ತ ಕ್ರಮ ಕೈಗೊಂಡು, ತ್ಯಾಜ್ಯ ಸಂಸ್ಕರಸಿ ದವರಿಗೆ ನೀರು ಹಾಗೂ ವಿದ್ಯುತ್ ಸ್ಥಗಿತಗೊಳಿಸಲು ಅಗತ್ಯ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳು-2026ರ ಕುರಿತು ಮಂಗಳವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಮತ್ತು ಇತರೆ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಘನ ತ್ಯಾಜ್ಯ ವಸ್ತು ವಿಲೇವಾರಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ನಿರ್ದೇಶನದ ರೀತ್ಯಾ, ಕೇಂದ್ರ ಸರ್ಕಾರವು ದಿನಾಂಕ: 01/04/2026 ರಿಂದ ಅನ್ವಯವಾಗು ವಂತೆ ಘನ ತ್ಯಾಜ್ಯ ವಸ್ತುಗಳ ನಿರ್ವ ಹಣಾ ನಿಯಮಗಳನ್ನು ಜಾರಿಗೊಳಿಸಲಾಗಿದ್ದು, ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ಕ್ರಮ ವಹಿಸಬೇಕು. ಸರಕಾರದ ಆದೇಶದನುಸಾರ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಿಸದಂತೆ ಜಿಲ್ಲಾ ಮಟ್ಟದ ವಿಜಿಲನ್ಸ್ ಕಮೀಟಿ ಹಾಗೂ ವಿಶೇಷ ಶೆಲ್ ರಚಿಸಲಾಗಿದ್ದು, ತ್ಯಾಜ್ಯ ಸಂಸ್ಕರಣೆಯ ಬಗ್ಗೆ ಸಮಿತಿಯ ಆದೇಶ ಪಾಲಿಸಬೇಕೆಂದು ನಿರ್ದೇಶಿಸಿ ದರು.

ಘನ ತ್ಯಾಜ್ಯ ವಸ್ತುಗಳ ನಿರ್ವಹಣೆಯ 2026ರ ಹೊಸ ನಿಯಮಾವಳಿಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಈ ಬಗ್ಗೆ ನಾಗರೀಕರಿಗೆ ವ್ಯಾಪಕವಾಗಿ ಅರಿವು ಮೂಡಿಸಬೇಕು. ಸ್ವಚ್ಚ ಮತ್ತು ಆರೋಗ್ಯ ಪರಿಸರ ರೂಪಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಘನ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮತ್ತು ನಿರ್ವಹಣೆ ಮಾಡದಿರುವುದು ಪರಿಸರ ಹಾಗೂ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಹಾಗಾಗಿ ಘನ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಕ್ತ ಕ್ರಮ ವಹಿಸುವಂತೆ ಸೂಚನೆ ನೀಡಿದರು.


ಹೊಸ ನಿಯಮಾವಳಿಗಳನ್ವಯ ಪ್ರತಿ ಸ್ಥಳೀಯ ಸಂಸ್ಥೆಗಳಲ್ಲಿ 4 ವಿಧದ ತ್ಯಾಜ್ಯ ವಿಂಗಡಣೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಈ ಹಿನ್ನೆಲೆಯಲ್ಲಿ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ಸ್ಪೆಷಲ್ ಕೇರ್ ತ್ಯಾಜ್ಯ (ಬಲ್ಬ್‌ಗಳು, ಬ್ಯಾಟರಿಗಳು, ಅವಧಿ ಮೀರಿದ ಔಷಧಿಗಳು, ಪೇಂಟ್ ಡಬ್ಬಿಗಳು ಇತ್ಯಾದಿ) ವಿಧದ ತ್ಯಾಜ್ಯವನ್ನು ಸಂಗ್ರಹಣೆ, ಸಾಗಾಣಿಕೆ ಹಾಗೂ ಸಂಸ್ಕರಣೆ ಮತ್ತು ವಿಲೇವಾರಿ ಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಘನ ತ್ಯಾಜ್ಯ ನಿರ್ವಹ ಣೆಯ ಬಗ್ಗೆ ಪ್ರತಿಯೊಬ್ಬ ನಾಗರೀಕ ರಿಗೆ ಸಮರ್ಪಕ ಅರಿವನ್ನು ಮೂಡಿಸಿ. ತ್ಯಾಜ್ಯ ಉತ್ಪಾದನೆ ಮಾಡುವ ಘಟಕಗಳನ್ನು ಗುರುತಿಸಿ ನೋಂದಾಯಿಸುವುದು ಮತ್ತು ಬೃಹತ್ ತ್ಯಾಜ್ಯವನ್ನು ಉತ್ಪಾದಿಸುವ ಸ್ಥಳಗಳಲ್ಲಿಯೇ ಘನ ತ್ಯಾಜ್ಯವನ್ನು ಸಂಸ್ಕರಿಸಲು ಕ್ರಮವಹಿಸಿ ಎಂದು ಹೇಳಿದರು.

ನೂತನ ನಿಯಮಾವಳಿಗಳನ್ನು ಉಲ್ಲಂಘನೆ ಮಾಡುವ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳ ವಿರುದ್ಧ ಕಡ್ಡಾಯ ವಾಗಿ ದಂಡ ವಿಧಿಸಬೇಕು ಹಾಗೂ ಅಂತಹ ವ್ಯಕ್ತಿ ಅಥವಾ ಸಂಘ- ಸಂಸ್ಥೆಗಳಿಗೆ ನೀರಿನ ಸಂಪರ್ಕವನ್ನು ಕಡಿತಗೊಳಿಸಲು ಕ್ರಮವಹಿಸಿ. ಪ್ರತಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಯಲ್ಲಿ ರಸ್ತೆ ಸ್ವಚ್ಚತೆಗಾಗಿ ನಿಯಮಿತ ವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಕಾಲಕಾ ಲಕ್ಕೆ ತೆರವುಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಒಣತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಸ್ಕರಣೆಗೊಳಿಸಿ, ಈ ತ್ಯಾಜ್ಯವನ್ನು ಮರುಸಂಸ್ಕರಣೆಗೊಳಿಸಲು ಸಹ ಕ್ರಮವಹಿಸಬೇಕು. ಪ್ರತಿ ಮನೆ ಮಟ್ಟದಲ್ಲಿ ಕಾಂಪೋಸ್ಟಿಂಗ್ ಬಯೋ ಗ್ಯಾಸ್ ಉತ್ಪಾದನೆಗೆ ಪ್ರೋತ್ಸಾಹ ಕೊಡುವಂತೆ ಸೂಚಿಸಲಾಯಿತು. ಪ್ರತಿ ನಿತ್ಯ ಮನೆ ಮನೆಗಳಲ್ಲಿ ಹಾಗೂ ರಸ್ತೆಗಳಲ್ಲಿನ ತ್ಯಾಜ್ಯ ಸಂಗ್ರಹಣೆಗೆ ಒತ್ತು ನೀಡಬೇಕು. ಒಟ್ಟಾರೆ ಕೊಪ್ಪಳ ಜಿಲ್ಲೆಯಲ್ಲಿನ ಎಲ್ಲಾ ಸ್ಥಳೀಯ ಸಂಸ್ಥೆಗಳ ಮೂಲಕ ಸ್ವಚ್ಚತೆಗೆ ಆದ್ಯತೆ ನೀಡಿ, ಸುತ್ತಮುತ್ತಲಿನ ಪರಿಸರ ಹಾಗೂ ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವಲ್ಲಿ ಆದ್ಯತೆಯ ಮೇರೆಗೆ ಕ್ರಮವಹಿಸಬೇಕು. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ಕೊಪ್ಪಳ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಟಿ.ಲಿಂಗರಾಜು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇ ಶಕರಾದ ಸೋಮಶೇಖರ ಗೌಡ ಪಾಟೀಲ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಜಗದೀಶ, ಕೊಪ್ಪಳ ವಿಶ್ವವಿದ್ಯಾಲ ಯದ ಕುಲ ಸಚಿವರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಭಾರತದಲ್ಲಿ ಪ್ರತಿ ವರ್ಷ ಮೇ.21 ರಂದು ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನಾಗಿ ಆಚರಣೆ



ಯಾದಗಿರಿ,ಮೇ.22-

ಜಗತ್ತಿನ ಸುಭದ್ರತೆ ಮತ್ತು ಶಾಂತಿಗೆ ದೊಡ್ಡ ಕಂಟಕವಾಗಿರುವುದು ಭಯೋತ್ಪಾದನೆ. ಈ ಕಾರಣಕ್ಕಾಗಿ ಭಯೋತ್ಪಾದನೆಯ ಅಪಾಯ ಮತ್ತು ಅದರ ಪರಿಣಾಮದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಭಾರತದಲ್ಲಿ ಪ್ರತಿ ವರ್ಷ ಮೇ.21 ರಂದು ರಾಷ್ಟ್ರೀಯ ಭಯೋ ತ್ಪಾದನಾ ವಿರೋಧಿ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಹೇಶ ಬಿರಾದಾರ ಅವರು ಹೇಳಿದರು.

ಯಾದಗಿರಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ ಇಂದು ಭಯೋತ್ಪಾದನಾ ವಿರೋಧಿ ದಿನ ಕುರಿತು ಪ್ರತಿಜ್ಞೆ ವಿಧಿ ಭೋದಿಸಿ ಅವರು ಮಾತನಾಡಿದರು.

ಭಯೋತ್ಪಾದಕರು ಸಾಮಾನ್ಯ ಜನರ ಮನಸ್ಸಿ ನಲ್ಲಿ ಭಯವನ್ನು ಸೃಷ್ಟಿಸುತ್ತಾರೆ, ತಮ್ಮ ಪೂರ್ವಗ್ರಹ ಪೀಡಿತ ಮನಸ್ಥಿತಿಯ ಕಾರಣಗಳ ಸಾಕಾರಕ್ಕಾಗಿ ಹಿಂಸೆಯನ್ನೇ ಪ್ರಧಾನ ವನ್ನಾಗಿರಿಸಿಕೊಂಡು ರಾಷ್ಟ್ರದ ಸುಭದ್ರ ತೆಗೆ ಧಕ್ಕೆ ತರುವಂತಹ, ಜನಸಾಮಾ ನ್ಯರ ಜೀವನಕ್ಕೆ ಸಂಕಷ್ಟವನ್ನುಂಟು ಮಾಡುವ, ಅಶಾಂತಿಯನ್ನು ಸೃಷ್ಟಿಸು ವುದೇ ಗುರಿಯಾಗಿಸಿಕೊಂಡು ನಾನಾ ವಿಧ್ವಂಸಕ ಕೃತ್ಯಗಳಿಗೆ ಮುಂದಾಗುತ್ತಾರೆ, ಆದ್ದರಿಂದ ಇಂತಹ ಸವಾಲುಗಳಿಗೆ ಸನ್ನದ್ಧರಾಗಿದ್ದುಕೊಂಡು, ಮಾನವೀಯತೆ ಮತ್ತು ಶಾಂತಿಯ ಸಂದೇಶವನ್ನು ಪ್ರಚಾರ ಮಾಡುತ್ತಾ ಭಯೋತ್ಪಾದನೆಯ ಚಟುವಟಿಕೆಗಳ ವಿರುದ್ಧ ಹೋರಾಡುವ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಲು ಭಾರತ ಸರ್ಕಾರವು ಪ್ರತಿ ವರ್ಷ ರಾಷ್ಟ್ರೀಯ ಭಯೋತ್ಪಾದನೆ ವಿರೋಧಿ ದಿನವನ್ನು ಆಚರಿಸುವ ಕ್ರಮವನ್ನು ಕೈಗೊಂಡಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳಾದ ಡಾ.ಎಂ.ಎಸ್.ಪಾಟೀಲ್ ಅವರು ಮಾತನಾಡಿ, ಅಹಿಂಸೆ ಮತ್ತು ಸಹಿಷ್ಣುತೆಗೆ ಹೆಸರಾದ ಭಾರತದ ಭವ್ಯ ಪರಂಪರೆಯಲ್ಲಿ ನಾವೆಲ್ಲರೂ ದೃಢ ವಿಶ್ವಾಸದಿಂದ ಎಲ್ಲಾ ರೀತಿಯ ಭಯೋತ್ಪಾದನೆ ಮತ್ತು ಹಿಂಸಾಚಾರವನ್ನು ಎದುರಿಸುತ್ತೇವೆಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಜಾಗೃತಿ ಮೂಡಿಸಲು ಪ್ರತಿಜ್ಞೆ ಮಾಡಬೇಕು ಮತ್ತು ಮಾನವನ ಜೀವನ ಮತ್ತು ಮೌಲ್ಯಗಳಿಗೆ ಧಕ್ಕೆ ತರುವ ಶಕ್ತಿಗಳ ವಿರುದ್ಧ ಹೋರಾಡ ಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಲಕ್ಷ್ಮೀಮುಂಡಾಸ್, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾ ಜಗನ್ನಾಥ, ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾ.ಹಣಮಂತರೆಡ್ಡಿ, ಸಹಾಯಕ ಆಡಳಿತ ಅಧಿಕಾರಿಗಳಾದ ಗಿರೀಶ ಹಾಗೂ ಆರೋಗ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೃಷಿ ಇಲಾಖೆ ರಾಜ್ಯ ಮಟ್ಟದ 2 ಪ್ರಶಸ್ತಿಗಳು

ಬಾಗಲಕೋಟೆ ,ಮೇ.22-

ಬಾಗಲಕೋಟೆ ಕೃಷಿ ಇಲಾಖೆಯು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 2026-27ನೇ ಸಾಲಿನ ಮುಂಗಾರು ಹಂಗಾಮಿನ ಕೃಷಿ ಇಲಾಖೆಯ ಕಾರ್ಯಾಗಾರದಲ್ಲಿ ವಿವಿಧ ಕಾರ್ಯಕ್ರಮಗಳ ಅತ್ಯುತ್ತಮ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಎರಡು ಪ್ರಶಸ್ತಿಗಳನ್ನು ಪಡೆದುಕೊಂಡಿದೆ.



ಕಳೆದ 2025-26ನೇ ಸಾಲಿನ ರಾಜ್ಯ ಬೀಜ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಜಿಲ್ಲೆಯ ಬೀಜೋತ್ಪಾದನಾ ಕೇಂದ್ರದ ಕಾರ್ಯವನ್ನು ಪ್ರಶಂಸಿಸಿ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದರೆ,

ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಜಿಲ್ಲೆಯ ಮಣ್ಣು ಪರೀಕ್ಷಾ ಪ್ರಯೋಗಾಲಯದ ಕಾರ್ಯವನ್ನು ಪ್ರಶಂಸಿಸಿ ರಾಜ್ಯ ಮಟ್ಟದ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಂದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಪ್ರಶಸ್ತಿ ಲಭಿಸಿದಕ್ಕೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಅಭಿನಂದನೆ ಸಲ್ಲಿಸಿದ್ದಾರೆ.

ಅಪರ ಜಿಲ್ಲಾಧಿಕಾರಿಯಾಗಿ ಪಿ. ಎನ್. ಲೋಕೇಶ್ ಅಧಿಕಾರ ಸ್ವೀಕಾರ

ವಿಜಯನಗರ,ಮೇ.22-

ಜಿಲ್ಲೆಯ ನೂತನ ಅಪರ ಜಿಲ್ಲಾಧಿಕಾರಿಯಾಗಿ ಪಿ. ಎನ್. ಲೋಕೇಶ್ ಅವರು ಬುಧವಾರ ಅಧಿಕಾರ ಸ್ವೀಕರಿಸಿದ್ದಾರೆ.

ಇನ್ನೂ ಅಪರ ಜಿಲ್ಲಾಧಿಕಾರಿಗಳಿಗೆ ಸಂಬಧಿಸಿದ ಸರ್ಕಾರಿ ಹಾಗೂ ಅರೆ ಸರ್ಕಾರಿ ಪತ್ರ ವ್ಯವಹಾರಗಳನ್ನು ಅವರ ಹೆಸರು ಹಾಗೂ ಹುದ್ದೆಯ ವಿಳಾಸಕ್ಕೆ ಕಳುಹಿಸಿಕೊಡಲು ಪ್ರಕಟಣೆಯಲ್ಲಿ ತಿಳಿಸಿದೆ.

ಭಯೋತ್ಪಾದನಾ ವಿರೋಧಿ ದಿನ: ಪ್ರಮಾಣ ವಚನ ಸ್ವೀಕಾರ

ಕೊಪ್ಪಳ ಮೇ 22 - ಭಯೋತ್ಪಾದನಾ ವಿರೋಧಿ ದಿನದ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮವು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆಯಿತು.

ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಪ್ರಮಾಣ ವಚನ ಬೋಧಿಸಿದರು. ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿಲ್ಲಾ ಖಜಾನಾಧಿಕಾರಿಗಳಾದ ಕೆ.ಸುರೇಶ್ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದು, ಪ್ರಮಾಣ ವಚನ ಸ್ವೀಕರಿಸಿದರು.

ಒಂದನೇಯ ಪುಟದಿಂದ

ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ
ರಿಪೋರ್ಟರ್ಸ್ ಗಿಲ್ಡ್‌ನಿಂದ 5 ಸಾವಿರ ನಗದು ಬಹುಮಾನ

ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯಕುಮಾರ ಜಾಗಟಗಲ್ ಮಾತನಾಡಿ, ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಮುಂದಿನ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಪತ್ರಕರ್ತರ ಕ್ಷೇಮಾಭಿವೃದ್ಧಿ ಜೊತೆಗೆ ವಿವಿಧ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಿರಿಯರ ಮಾರ್ಗದರ್ಶನದಲ್ಲಿ ನಡೆಸಲಾಗುವುದು. ಮಕ್ಕಳ ಕೌಶಲ್ಯ ಮತ್ತು ಸಾಧನೆಗಳನ್ನು ಗುರುತಿಸಿ ಬೆಳೆಸಲು ಪಾಲಕರು ಹೆಚ್ಚಿನ ಗಮನ ಹರಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಜಾಪ್ರಸಿದ್ಧ ಪತ್ರಿಕೆಯ ಸಂಪಾದಕರಾದ ಎಚ್. ಶಿವರಾಜ್ ಉಪಸ್ಥಿತರಿದ್ದರು. ಗಿಲ್ಡ್ ಪ್ರಧಾನ ಕಾರ್ಯದರ್ಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸದಸ್ಯ ರಾಚಯ್ಯಸ್ವಾಮಿ ಸ್ವಾಗತಿಸಿದರು. ಮಲ್ಲನಗೌಡ ಪಾಟೀಲ ಕಾರ್ಯಕ್ರಮ ನಿರೂಪಣೆ ಮಾಡಿದರು. ಜಂಟಿ ಕಾರ್ಯದರ್ಶಿ ಶ್ರೀಕಾಂತ್ ಸಾವೂರು ವಂದಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಹಾಗೂ ಕಿರಿಯ ಪತ್ರಕರ್ತರು ಭಾಗವಹಿಸಿದ್ದರು.

ಭ್ರಷ್ಟರ ರಕ್ಷಣೆಗೆ ನಿಂತ ಸಿಇಒ - ವಿಶ್ವನಾಥ್ ಬಲ್ಲಿದವ್ ಆರೋಪ

ಮಾತೃ ಇಲಾಖೆಗೆ ವರ್ಗಾಯಿಸುವಂತೆ ಹಾಗೇಯೆ ಸರಿಯಾಗಿ ಕರ್ತವ್ಯ ನಿರ್ವಹಿಸದ ಶಿಇಒ ಈಶ್ವರ್ ಕಾಂದೂ ಅವರ ಮೇಲೆ ಕ್ರಮ ಜರುಗಿಸುವಂತೆ ಬಹುಮಹಡಿ ಕಟ್ಟಡದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ದೂರು ನೀಡಿದರು.

ಈ ಸಂದರ್ಭದಲ್ಲಿ ಮೋಹನ್ ಬಲ್ಲಿದವ್, ದೀಪಕ್ ಭಂಡಾರಿ ಇತರರು ಉಪಸ್ಥಿತರಿದ್ದರು.

ರಿಮ್ಸ್ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗಾಗಿ ವಿಶ್ರಾಂತಿ -ಭೋಜನ ಕೊಠಡಿ ಲೋಕಾರ್ಪಣೆ
ರೋಗಿಗಳು, ಕುಟುಂಬಸ್ಥರಿಗೆ ಅನುಕೂಲ ಕಲ್ಪಿಸಿದ ರಿಮ್ಸ್ ಆಡಳಿತ

ಈ ವ್ಯವಸ್ಥೆಯಿಂದ ಆಸ್ಪತ್ರೆ ಆವರಣದಲ್ಲಿ ಸ್ವಚ್ಛತೆ ಕಾಪಾಡಲು ಸಹಕಾರಿಯಾಗಲಿದ್ದು, ಸಾರ್ವಜನಿಕರು ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಆಸ್ಪತ್ರೆಯ ಶಿಸ್ತನ್ನು ಕಾಪಾಡಬೇಕು ಎಂದು ಮನವಿ ಮಾಡಲಾಗಿದೆ.

ಈ ಕುರಿತು ಮಾಹಿತಿ ನೀಡಿದ ವೈದ್ಯಕೀಯ ಅಧೀಕ್ಷಕರು, ಸಾರ್ವಜನಿಕರ ಅನುಕೂಲಕ್ಕಾಗಿ ಮುಂದಿನ ದಿನಗಳಲ್ಲಿ ಇನ್ನಷ್ಟು ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಸರ್ಕಾರಿ ಜಾಗ ಕಬಳಿಕೆ ಯತ್ನ; ಕ್ರಮಕ್ಕೆ ದಲಿತ ಸಂಘಟನೆಗಳ ಒತ್ತಾಯ

ಎಂ.ಮನೋಹರ್, ಶಾಂತಪ್ಪ ಪಿತಗಲ್, ಹನುಮಂತ ಕ್ಯಾದಿಗೇರಾ, ಸಾಬಣ್ಣ ಸಿರವಾರ, ಜೆ.ಪ್ರಕಾಶ, ನಾಗರಾಜ್ ಜಾಗಟಗಲ್, ಶಿವುಕುಮಾರ ಮರಾಠ, ಮಹಾಂತೇಶ ಹುಣಚೇಡ, ಹನುಮಂತ ಗಣದಿನ್ನಿ. ರವಿ ಗಣದಿನ್ನಿ, ನರಸಿಂಗಪ್ಪ ಗಣದಿನ್ನಿ, ಸೇರಿದಂತೆ ಇತರರು ಇದ್ದರು.

ರಾಷ್ಟ್ರೀಯ ಹೆದ್ದಾರಿ ಸುರಕ್ಷತೆ, ಆಕ್ರಮಣ ತೆರವು, ಅಪಘಾತ ತಡೆಗೆ ಕ್ರಮ
ಸುರಕ್ಷತಾ ಕ್ರಮಗಳನ್ನು ಪರಿಣಾಮಾರಿಯಾಗಿ ಅನುಷ್ಠಾನಗೊಳಿಸಿ : ಡಿಸಿ



ಬಾಗಲಕೋಟೆ,ಮೇ.22-

ರಾಷ್ಟ್ರೀಯ ಹೆದ್ದಾರಿಗಳ ಸುರಕ್ಷತೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಸುರಕ್ಷತಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಗುರುವಾರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳ ಸುರಕ್ಷತೆ, ಆಕ್ರಮಣಗಳ ತೆರವು ಹಾಗೂ ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ವೋಚ್ಚ ನ್ಯಾಯಾಲಯ ದಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂ ಧಿಸಿದಂತೆ ನೀಡಿರುವ ಆದೇಶಗಳ ಅನುಷ್ಠಾನ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾ ಡಿದ ಅವರು ರಾಷ್ಟ್ರೀಯ ಹೆದ್ದಾರಿಗ ಳಲ್ಲಿ ಉಂಟಾಗುವ ಅಪಘಾತಗಳ ಸಂಖ್ಯೆ ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಾಷ್ಟ್ರೀಯ ಹೆದ್ದಾರಿ ಪಕ್ಕದ ಅನಧಿಕೃತ ಆಕ್ರಮಗಳನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಕ್ರಮಕೈಗೊಳ್ಳಬೇಕು. ಹೆದ್ದಾರಿ ವ್ಯಾಪ್ತಿಯಲ್ಲಿ ಗೊತ್ತುಪಡಿಸಿದ ಬೇ, ಲೇ-ಬೈ ಅಥವಾ ವೇಸೈಡ್ ಸೌಲಭ್ಯವನ್ನು ಹೊರತುಪಡಿಸಿ ನಿಲ್ಲಿಸುವದನ್ನು ತಡೆಯಬೇಕು. ಇದಕ್ಕಾಗಿ ಪೊಲೀಸ್ ಇಲಾಖೆಯ ಜೊತೆಗೆ ಇತರೆ ಇಲಾಖೆ ಯೊಂದಿಗೆ ಜಂಟಿಯಾಗಿ ತಪಾಸಣೆ ಮತ್ತು ಗಸ್ತು ತಿರುಗುವ ಕೆಲಸವಾಗ ಬೇಕು. ಅತಿಕ್ರಮಣ ದೂರುಗಳಿಗಾಗಿ ಸಾರ್ವಜನಿಕರು ಉಚಿತ ಸಹಾಯವಾಣಿ ಸಂಖ್ಯೆ 1033 ಗೆ ಕರೆ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಅಪಘಾತ ವಲಯಗಳ (ಬ್ಲಾಕ್ ಸ್ಪಾಟ್) ಪಟ್ಟಿಯನ್ನು ಪಡೆದುಕೊಂಡು ಸೂಕ್ತ ಸೂಚನಾ ಫಲಕ, ಬೀದಿ ದೀಪ, ವೇತ ನಿಯಂತ್ರಣ ಕ್ರಮ ಹಾಗೂ ರಸ್ತೆ ಸುರಕ್ಷತಾ ವ್ಯವಸ್ಥೆಗಳನ್ನು ಕಲ್ಪಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಪೊಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆ, ಸಾರಿಗೆ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಸಮನ್ವಯದೊಂದಿಗೆ ಹೆದ್ದಾರಿ ಸುರಕ್ಷತಾ ಕ್ರಮಗಳನ್ನು ಅನುಸ್ಠಾನಗೊಳಿಸಲು ಮುಂದಾಗಬೇಕು ಎಂದರು.

ಹೆದ್ದಾರಿ ಪಕ್ಕದಲ್ಲಿ ಅನಧಿಕೃತ ಪ್ರವೇಶ ಮಾರ್ಗಗಳು, ಅಕ್ರಮ ವಾಣಿಜ್ಯ ಚಟುವಟಿಕೆಗಳು ಹಾಗೂ ವಾಹನ ನಿಲುಗಡೆಯಿಂದ ಅಪಘಾತಗಳ ಸಾಧ್ಯತೆ ಹೆಚ್ಚಿತ್ತಿರುವುದರಿಂದ ಇವುಗಳ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು. ರಸ್ತೆ ಅಪಘಾತಗಳಲ್ಲಿ ಸಾವಿನ ಪ್ರಮಾಣ ತಗ್ಗಿಸಲು ಜಾಗೃತಿ ಕಾರ್ಯಕ್ರಮಗಳು, ಸಂಚಾರ ನಿಯಮ ಪಾಲನೆ ಹಾಗೂ ತುರ್ತು ಚಿಕಿತ್ಸಾ ವ್ಯವಸ್ಥೆ ಬಲಪಡಿಸಬೇಕು ಎಂದು ತಿಳಿಸಿದರು.

ಹೆದ್ದಾರಿ ಸುರಕ್ಷತಾ ವಲಯದೊಳಗಿನ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಎನ್.ಎಚ್.ಎ.ಐ, ಪಿಡಬ್ಲೂಡಿ ಪೂರ್ವ ಅನುಮತಿ ಇಲ್ಲದೇ ಸ್ಥಳೀಯ ಸಂಸ್ಥೆಗಳು ಗ್ರಾ.ಪಂಗಳು ಯಾವುದೇ ಪರವಾನಿಗೆ ಎನ್‌ಓಸಿ ಅಥವಾ ವ್ಯಾಪಾರಕ್ಕೆ ಅನುಮೋದನೆ ನೀಡಬಾರದು. ತುರ್ತಾಗಿ ಜಿಲ್ಲಾ ಹೆದ್ದಾರಿ ಸುರಕ್ಷತಾ ಕಾರ್ಯಪಡೆ ರಚಿಸಿ ಅದರ ಮೂಲಕ ಅತಿಕ್ರಮಣ ತಡೆಯುವ ಕೆಲಸ ವಾಗಬೇಕು. ಡಬ್ಲ್ಯೂ.ಎಸ್.ಓಗಳು ಕನಿಷ್ಟ ವಿಶ್ರಾಂತಿ ಪ್ರದೇಶಗಳು, ಆಹಾರ ಸೇವೆ, ಶೌಚಾಲಯ, ಸುರಕ್ಷಿತ ಪಾರ್ಕಿಂಗ್ ವ್ಯವಸ್ಥೆ ಹೊಂದಿರುವದನ್ನು ಪರಿಶೀಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯೆಲ್, ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಪ್ರಾದೇಶಿಕ ಸಾರಿಗೆ ಅಧಿಕಾರಿ ಚಂದ್ರಶೇಖರ ಪಾಟೀಲ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರ ಪವನ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ, ಸೇರಿದಂತೆ ಇತರೆ ಹೆದ್ದಾರಿ ಪ್ರಾಧಿಕಾರದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಉಪಸ್ಥಿತರಿದ್ದರು.

ಜು.11ರಂದು ರಾಷ್ಟ್ರೀಯ ಲೋಕ್ ಅದಾಲತ್

ಬಳ್ಳಾರಿ,ಮೇ.22-

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶ ನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಜು.11 ರಂದು ಬೆಳಿಗ್ಗೆ 10 ಗಂಟೆಗೆ ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದೆ.

ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಚೆಕ್ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿ ಯಾಗಬಹುದಾದ ಪ್ರಕರಣಗಳನ್ನು ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ. ಸಾರ್ವಜನಿಕರು, ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊ ಳ್ಳುವುದರ ಮೂಲಕ ತಮ್ಮ ವಿವಾದ ಗಳನ್ನು ಅಂತ್ಯಗೊಳಿಸಿಕೊಳ್ಳಬಹುದು. ರಾಷ್ಟ್ರೀಯ ಲೋಕ್ ಅದಾಲತ್ ಅಂಗ ವಾಗಿ ಪ್ರತಿದಿನ ವಿವಿಧ ನ್ಯಾಯಾಲಯ ಗಳಲ್ಲಿ ಪೂರ್ವ ಭಾವಿ ಬೈಠಕ್‌ಗಳು ನಡೆಯುತ್ತಲಿರುತ್ತವೆ. ಪೂರ್ವಭಾವಿ ಬೈಠಕ್‌ಗಳ ಪ್ರಯೋ ಜನವನ್ನು ಸಾರ್ವಜನಿಕರು ಪಡೆದು ಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ದೂ.08392-278077 ಹಾಗೂ ಎನ್‌ಎಎಲ್‌ಎಸ್‌ಎ ಸಹಾಯವಾಣಿ ಸಂಖ್ಯೆ 15100 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು.

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಸುಧಾರಣಾ ಕ್ರಮಕ್ಕೆ ಸೂಚನೆ



ಕೊಪ್ಪಳ,ಮೇ.22-

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಶೌಚಾಲಯಗಳು ಸೇರಿದಂತೆ ಎಲ್ಲಾ ಕಡೆಗೆ ಶುಚಿತ್ವ ಕಾಣಬೇಕು. ಕೈಗೊಂಡ ಎಲ್ಲ ಕ್ರಮಗಳ ಬಗ್ಗೆ ಭಾವಚಿತ್ರ ಸಮೇತ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ. ಹೆಚ್.ಕೃಷ್ಣ ಅವರು ಕಿಮ್ಸ್‌ನ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮೇ 21ರಂದು ಜಿಲ್ಲಾ ಪಂಚಾಯ ತ್‌ನ ಜೆ.ಹೆಚ್.ಪಟೇಲ್ ಸಭಾಂಗಣ ದಲ್ಲಿ ಆಹಾರ ಇಲಾಖೆ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಆಕಸ್ಮಿಕ ಭೇಟಿ ವೇಳೆ ಎಲ್ಲಾ ನ್ಯಾಯ ಬೆಲೆ ಅಂಗಡಿಗಳಲ್ಲಿ ಕಣ್ಣಿಗೆ ಅಶುಚಿತ್ವ ರಾಚಿತು. ಇದು ನಿಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಅಧಿಕಾರಿ ಗಳಿಗೆ ಪ್ರಶ್ನಿಸಿದ ಅಧ್ಯಕ್ಷರು, ಅಂಗಡಿ ಯಲ್ಲಿ ಜಾಗ ಇಲ್ಲ ಎಂದು ಆಹಾರ ಪದಾರ್ಥಗಳ ಚೀಲಗಳನ್ನು ಎಲ್ಲೆಂ ದರಲ್ಲಿ ಬೀಸಾಕುವುದು ಅಶಿಸ್ತನ್ನು ತೋರುತ್ತದೆ ಎಂದರು. ಜಾಗೃತಿ ಸಮಿತಿ ಸದಸ್ಯರ ಫಲಕಗಳನ್ನು ಕಾಣುವಂತೆ ಹಾಕಬೇಕು ಎಂದು ಸೂಚನೆ ನೀಡಿದರು.

ಹಾಸ್ಟೇಲಗಳಿಗೆ ಭೇಟಿ ನೀಡಿದ ವೇಳೆ ವಸತಿ ನಿಲಯದಲ್ಲಿನ ವಿದ್ಯಾರ್ಥಿ ಗಳಿಗೆ ಕೆಲವು ಮೂಲ ಸೌಕರ್ಯ ಕಲ್ಪಿಸದೇ ಇರುವುದು ಕಂಡು ಬಂದಿದೆ. ಕೆಲ ವಸತಿ ನಿಲಯಗಳಲ್ಲಿ ಮಕ್ಕಳಿಗೆ ಶುದ್ಧ ನೀರು ಸಿಗುತ್ತಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಿಸಿಟಿವಿ ಕ್ಯಾಮರಾ ಅಳವಡಿಸಿಲ್ಲ. ರಾತ್ರಿ ಕಾವಲುಗಾರರು ಇಲ್ಲ. ಲೈಬ್ರರಿಗಳಲ್ಲಿ ಪುಸ್ತಕಗಳಿಲ್ಲ. ಕಂಪ್ಯೂಟರ್ ರೂಮಿನಲ್ಲಿ ಕಂಪ್ಯೂಟರಗಳು ಕಾಣುತ್ತಿಲ್ಲ. ಕೆಲವು ಕಡೆಗಳಲ್ಲಿ ಇರುವ ಕಂಪ್ಯೂಟರಗಳು ಕೆಟ್ಟು ಹೋಗಿವೆ. ನಿಯಮಿತವಾಗಿ ಮೊಟ್ಟೆ ನೀಡುತ್ತಿಲ್ಲ. ಆಹಾರವು ಶುಚಿ ಮತ್ತು ರುಚಿಯಾಗಿಲ್ಲ. ಒಂದೇ ಕೋಣೆಯಲ್ಲಿ ಹತ್ತಕ್ಕು ಹೆಚ್ಚು ವಿದ್ಯಾರ್ಥಿಗಳನ್ನು ಇರಿಸಿರುವುದು ಕಂಡು ಬಂದಿದೆ. ತೆಗೆದುಕೊಂಡ ದಾಸ್ತಾನಿಗೂ ಬಳಕೆಯಾದ ದಾಸ್ತಾನಿಗೂ ತಾಳೆ ಆಗದಿರುವ ಎಷ್ಟೋ ಲೋಪಗಳ ಅಂಶಗಳನ್ನು ಹಾಸ್ಟೇಲಗಳ ಭೇಟಿ ವೇಳೆ ಕಂಡು ಬಂದಿವೆ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಉಪ ನಿರ್ದೇಶಕರು ಮತ್ತು ತಾಲೂಕಿನ ಅಧಿಕಾರಿಗಳು ಹಾಗು ಅಲ್ಪಸಂಖ್ಯಾತ ಕಲ್ಯಾಣ ಇಲಾಖಾಧಿಕಾರಿಗಳು ಮತ್ತು ತಾಲೂಕಿನ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಕೂಡಲೇ ಎಲ್ಲ ಪರಿಹಾರ ಕ್ರಮಗಳನ್ನು ತೆಗೆದುಕೊಂಡು ಜಿಲ್ಲಾಡಳಿ ತಕ್ಕೆ ವರದಿ ನೀಡಬೇಕು ಎಂದು ಅಧ್ಯಕ್ಷರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮಧ್ಯಾಹ್ನ ಬಿಸಿ ಊಟ ಯೋಜನೆಯು ವಿದ್ಯಾರ್ಥಿಗಳಿಗೆ ಸಾಕಷ್ಟು ಉಪಯುಕ್ತವಾಗಿದೆ. ಆದರೆ ಈ ಯೋಜನೆಯನ್ನು ಅನುಷ್ಠಾನ ಮಾಡುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುವುದು ಕಾಣುತ್ತಿದೆ. ಆಹಾರ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದ ದಾಸ್ತಾನು ಸ್ವೀಕೃತಿ ವಹಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲ. ನಾಮಕಾವಾಸ್ತೆ ಅನ್ನುವ ಹಾಗೆ ಆಹಾರ ನೀಡುವ ಮೆನು ಹಾಕಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪಾಲಕರ ಕೋರಿಕೆ ಮತ್ತು ವಿದ್ಯಾರ್ಥಿ ಗಳ ಮನವಿಗೆ ಮಾನ್ಯತೆ ನೀಡಿ ಎಲ್ಲ ಶಾಲೆಗಳಲ್ಲಿ ಮೊಟ್ಟೆಯನ್ನು ಕಡ್ಡಾಯಗೊಳಿಸಬೇಕು ಎಂದು ಸೂಚನೆ ನೀಡಿದರು.

ವಸತಿ ನಿಲಯಗಳಲ್ಲಿ ಹೆಚ್ಚಾಗಿ ರೈಸ್ ಊಟವನ್ನೇ ನೀಡುತ್ತಾರೆ ಎಂದು ವಿದ್ಯಾರ್ಥಿಗಳು ದೂರುತಿದ್ದು, ಇದನ್ನು ಸರಿಪಡಿಸಬೇಕು. ಚಪಾತಿ, ರೊಟ್ಟಿ ಸಮೇತ ಗುಣಮಟ್ಟದ ಊಟ ನೀಡಲು ಕ್ರಮ ವಹಿಸಬೇಕು ಎಂದು ಆಯೋಗದ ಸದಸ್ಯರಾದ ಮಾರುತಿ ಎಂ ದೊಡ್ಡಲಿಂಗಣ್ಣವರ ತಿಳಿಸಿದರು.

ಆಹಾರ ತಯಾರಿಕೆಯನ್ನು ಅಚ್ಚುಕಟ್ಟಾಗಿ ಮಾಡುವ ಬಗ್ಗೆ ಮತ್ತು ರುಚಿ ಶುಚಿಯಾದ ಆಹಾರ ತಯಾರಿಕೆಯ ಬಗ್ಗೆ ವಸತಿ ನಿಲಯಗಳಲ್ಲಿನ ಅಡುಗೆದಾರರಿಗೆ ಕಾಲಕಾಲಕ್ಕೆ ಅರಿವು ಮೂಡಿಸುವ ಕಾರ್ಯಕ್ರಮ ರೂಪಿಸ ಬೇಕು ಎಂದು ಸದಸ್ಯರಾದ ಕೆ.ಎಸ್. ವಿಜಯಲಕ್ಷ್ಮಿ ಅವರು ಸೂಚನೆ ನೀಡಿ ದರು.

ಒಂದು ತಿಂಗಳ ಗಡುವು: ಈ ವೇಳೆ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ಅವರು ಮಾತನಾಡಿ, ಕರ್ನಾಟಕ ರಾಜ್ಯ ಆಹಾರ ಆಯೋ ಗವು ಕೊಪ್ಪಳ ಜಿಲ್ಲೆಗೆ ಆಗಮಿಸಿ, ವಿವಿ ಧೆಡೆ ಆಕಸ್ಮಿಕ ಭೇಟಿ ಕೈಗೊಂಡು ಗುರುತಿ ಸಿದ ಲೋಪಗಳ ಬಗ್ಗೆ ಸಭೆಯ ಗಮನಕ್ಕೆ ತಂದಿದ್ದಾರೆ. ಆಯಾ ಇಲಾಖೆಗಳ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಈ ವಿಷಯಕ್ಕೆ ಮೊದಲಾದ್ಯತೆ ನೀಡಿ, ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ಒಂದು ತಿಂಗಳೊಳಗೆ ಜಿಲ್ಲಾಡಳಿತಕ್ಕೆ ಮತ್ತು ಜಿಲ್ಲಾ ಪಂಚಾಯತ್ ಸಿಇಓ ಅವರಿಗೆ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಗಡುವು ವಿದಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ವರ್ಣಿತ್ ನೇಗಿ, ಕರ್ನಾಟಕ ರಾಜ್ಯ ಆಹಾರ ಆಯೋಗದ ಸದಸ್ಯರಾದ ಲಿಂಗರಾಜ ಕೋಟೆ, ಸುಮಂತ್ ರಾವ್, ಎ.ರೋಹಿಣಿ ಪ್ರಿಯ, ಹೆಚ್ಚುವರಿ ಜಿಲ್ಲಾ ಪೊಲೀಸ್ ವಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೋಗಲದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬದ ಕಲ್ಯಾಣಾಧಿಕಾರಿಗಳಾದ ಡಾ. ಟಿ.ಲಿಂಗರಾಜು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅಜ್ಮೀರ ಅಲಿ, ಕೊಪ್ಪಳ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ಅಂಕಿತ ಅಧಿಕಾರಿಗಳಾದ ಡಾ. ಅಲಕನಂದ ಮಳಗಿ, ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಆಹಾರ ಇಲಾಖೆ ಉಪನಿರ್ದೇಶಕರಾದ ವಿಶ್ವನಾಥಗೌಡ ಎಂ.ಎನ್. ಅವರು ಸ್ವಾಗತಿಸಿದರು.

ತಹಶೀಲ್ದಾರರ ವರ್ಗಾವಣೆಗೆ ದಲಿತ ರಕ್ಷಣಾ ವೇದಿಕೆ ಒತ್ತಾಯ
ಜಿಲ್ಲಾಧಿಕಾರಿಗಳ ಮೂಲಕ ಕಂದಾಯ ಸಚಿವರಿಗೆ ಮನವಿ ಸಲ್ಲಿಕೆ



ರಾಯಚೂರು,ಮೇ.22-

ಸಿಂಧನೂರು ತಾಲೂಕಿನ ತಹಶೀಲ್ದಾರರಾಗಿರುವ ಶ್ರೀ ಅರುಣಕುಮಾರ ದೇಸಾಯಿ ಅವರನ್ನು ತಕ್ಷಣವೇ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆ ವತಿಯಿಂದ ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ರಾಯಚೂರು ಜಿಲ್ಲಾಧ್ಯಕ್ಷ ಕಾಶಿನಾಥ ಕುರಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಮನವಿ ಸಲ್ಲಿಕೆ ಕಾರ್ಯಕ್ರಮದಲ್ಲಿ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿ, ಜಿಲ್ಲಾಧಿಕಾರಿಗಳ ಮೂಲಕ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಮನವಿ ರವಾನಿಸಿದರು.

ಮನವಿಯಲ್ಲಿ, ಸಿಂಧನೂರು ತಹಶೀಲ್ ಕಚೇರಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ತಹಶೀಲ್ದಾರರ ಕಾರ್ಯವೈಖರಿಯಿಂದ ಸಾರ್ವಜನಿಕರು, ರೈತರು ಹಾಗೂ ವಿವಿಧ ಸಂಘಟನೆಗಳಿಗೆ ತೊಂದರೆ ಉಂಟಾಗುತ್ತಿದೆ ಎಂದು ಆರೋಪಿಸಲಾಗಿದೆ.

ಸಾರ್ವಜನಿಕರ ಅರ್ಜಿಗಳು ಸಮಯಕ್ಕೆ ವಿಲೇವಾರಿಯಾಗುತ್ತಿಲ್ಲ, ಕಡತಗಳ ನಿರ್ವಹಣೆಯಲ್ಲಿ ವಿಳಂಬವಾಗುತ್ತಿದೆ, ಕಚೇರಿಯಲ್ಲಿ ತಹಶೀಲ್ದಾರರು ಸಮಯಕ್ಕೆ ಸಿಗುತ್ತಿಲ್ಲ ಹಾಗೂ ಸಂಘಟನೆಗಳ ಮನವಿಗಳಿಗೆ ಸ್ಪಂದನೆ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಲಾಗಿದೆ.

ರೈತರ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಸಿಗದೆ ಜನರು ಸಂಕಷ್ಟ ಅನುಭವಿಸುತ್ತಿದ್ದು, ಆಡಳಿತ ವ್ಯವಸ್ಥೆಯ ಮೇಲಿನ ನಂಬಿಕೆ ಕುಸಿಯುವಂತಾಗಿದೆ ಎಂದು ದೂರಲಾಗಿದೆ.

ಒಂದೇ ಕಚೇರಿಯಲ್ಲಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಹಿನ್ನೆಲೆ ಹಾಗೂ ಸಾರ್ವಜನಿಕರಿಂದ ಬಂದಿರುವ ದೂರುಗಳನ್ನು ಪರಿಗಣಿಸಿ, ತಹಶೀಲ್ದಾರರನ್ನು ಬೇರೆಡೆ ವರ್ಗಾವಣೆ ಮಾಡಿ ಜನಪರ ಹಾಗೂ ನಿಷ್ಠಾವಂತ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಸಂಘಟನೆ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಮಸ್ಕಿ ತಾಲೂಕು ಅಧ್ಯಕ್ಷ ಬಸವರಾಜ ಮಸ್ಕಿ, ಸಿಂಧನೂರು ತಾಲೂಕು ಅಧ್ಯಕ್ಷ ವಿರುಪಾಕ್ಷಿ ಸಾಸಲಮರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

52 ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ಸಂಪುಟ ಒಪ್ಪಿಗೆ

ಬೆಂಗಳೂರು,ಮೇ.22-

ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಪೈಕಿ ಕಲಬುರಗಿಯ ಆಳಂದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2022ರಲ್ಲಿ ನಡೆದ ಕೋಮು ಗಲಭೆ ಸಂಬಂಧ ದಾಖಲಾಗಿದ್ದ ಪ್ರಕರಣವನ್ನು ಅಭಿಯೋಜನೆಯಿಂದ ಕೈ ಬಿಡಲು ಸಮ್ಮತಿಸಲಾಗಿದೆ. ದರ್ಗಾ ಆವರಣದಲ್ಲಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ತೆರಳಿದ್ದ ಮೆರವಣಿಗೆಯ ಮೇಲೆ ಮತ್ತು ಪೊಲೀಸ್ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಾಹನಗಳ ಮೇಲೆ ದುಷ್ಕರ್ಮಿಗಳು ಆಕಸ್ಮಿಕವಾಗಿ ಕಲ್ಲು ತೂರಾಟ ನಡೆಸಿದ್ದರು. ಇದರಿಂದಾಗಿ ಪರಿಸ್ಥಿತಿ ಉದ್ವಿಗ್ನಗೊಂಡು ಕೋಮು ಸಂಘರ್ಷ, ಗಲಭೆಗೆ ಕಾರಣವಾಗಿತ್ತು. ಇದೀಗ ಆರೋಪಿಗಳ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಅಭಿಯೋಜನೆಯಿಂದ ಹಿಂಡಪಡೆಯಲು ತೀರ್ಮಾನಿಸಲಾಗಿದೆ.

ಉಳಿದಂತೆ ಕಾವೇರಿ ಗಲಾಟೆ, ತಮಿಳುನಾಡು ಸರ್ಕಾರದ ವಿರುದ್ಧದ ಪ್ರತಿಭಟನೆ, ಹಿಂದಿ, ಆಂಗ್ಲ ಭಾಷೆ ಬಳಕೆ ವಿರುದ್ಧದ ಪ್ರತಿಭಟನೆ ಸಂಬಂಧ ದಾಖಲಾಗಿದ್ದ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರ ಮೇಲಿನ ಕ್ರಿಮಿನಲ್ ಮೊಕದ್ದಮೆಗಳನ್ನು ಕೈ ಬಿಡಲು ಸಂಪುಟ ತೀರ್ಮಾನಿಸಿದೆ. ಕರವೇ ನಾರಾಯಣ ಗೌಡ, ವಾಟಾಳ್ ನಾಗರಾಜ್ ಸೇರಿ ಕನ್ನಡ ಪರ ಹೋರಾಟಗಾರರ ಮೇಲಿನ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ತೀರ್ಮಾನಿಸಲಾಗಿದೆ. ಅದೇ ರೀತಿ ವಿವಿಧ ದಲಿತ ಸಂಘಟನೆ ಕಾರ್ಯಕರ್ತರು, ರೈತರು, ಕನ್ನಡ ಪರ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಹಿಂಪಡೆಯಲು ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ.

ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಿ ಪಿ.ಎನ್.ದೇಸಾಯಿ ಆಯ್ಕೆ: ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನು ಆಯ್ಕೆ ಮಾಡುವ ಕುರಿತು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ ಅಧ್ಯಕ್ಷರಾದ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು ಟಿ ಖಾದರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಗೃಹ ಸಚಿವರು ಸಭೆ ನಡೆಸಿದರು. ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರನ್ನು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ಆಯ್ಕೆ ಮಾಡಿದೆ. ಈ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿದೆ. ತ್ಯಾಜ್ಯ ಸಾಗಣೆ ನಿರ್ವಹಣೆ ಟೆಂಡರ್ ಅಂಗೀಕರಿಸಲು ಉನ್ನತ ಪ್ರಾಧಿಕಾರಕ್ಕೆ ಅಧಿಕಾರ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಮತ್ತು ರಸ್ತೆ ಗುಡಿಸುವಿಕೆಯ ತ್ಯಾಜ್ಯದ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಸಾಗಣೆಯನ್ನು ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ದ್ವಿತೀಯ ಹಂತವೂ ಸೇರಿ ತ್ಯಾಜ್ಯ ಸಾಗಣಿಕ ಸೇವೆ ಒಂದು ವೇಳೆ ಶೇ.5 ಕ್ಕಿಂತ ಹೆಚ್ಚಿನ ಮೌಲ್ಯದ ಟೆಂಡರ್ ಅನ್ನು ಅಂಗೀಕರಿಸಲು ಸಮರ್ಥನೀ ಯ ಕಾರಣಗಳನ್ನು ದಾಖಲಿಸಿ ಉನ್ನತ ಪ್ರಾಧಿಕಾರದ ಅಧಿಕಾರಕ್ಕೆ ಬಿಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಅಂಗನವಾಡಿ ಕೇಂದ್ರ, ಆಸ್ಪತ್ರೆ, ವಸತಿ ನಿಲಯ, ಆಹಾರ ಗೋದಾಮುಗಳಲ್ಲಿ ಸಾಕಷ್ಟು ಲೋಪ: ಡಾ.ಹೆಚ್ ಕೃಷ್ಣ

ಕೊಪ್ಪಳ,ಮೇ.22-

ಕೊಪ್ಪಳ ಜಿಲ್ಲೆಯ ಅಂಗನವಾಡಿ ಕೇಂದ್ರಗಳು, ಆಸ್ಪತ್ರೆ, ವಸತಿ ನಿಲಯಗಳು, ಗೋದಾಮು ಮತ್ತು ಇತರೆ ಸ್ಥಳಗಳಿಗೆ ಭೇಟಿ ನೀಡಿದಾಗ ಸಾಕಷ್ಟು ಲೋಪಗಳು ಕಂಡು ಬಂದಿದೆ. ಕೂಡಲೇ ಸುಧಾರಣಾ ಕ್ರಮಗಳನ್ನು ಕೈಗೊಂಡು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್.ಕೃಷ್ಣ ಅವರು ತಿಳಿಸಿದರು.

ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಮೇ 21ರಂದು ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು. ಕೊಪ್ಪಳ ಜಿಲ್ಲೆಯಲ್ಲಿ ಮೇ 19 ರಿಂದ 21ರವರೆಗೆ ಅನಿರೀಕ್ಷಿತ ಭೇಟಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಆಯೋಗ ಭೇಟಿಯ ಬಗ್ಗೆ ಸುದ್ದಿ ಮಾಡಿದರೆ ಕೆಲವರು ಎಚ್ಚೆತ್ತುಕೊಳ್ಳುತ್ತಾರೆ ಎಂದು ತಿಳಿದು, ಯಾರಿಗೂ ಮಾಹಿತಿ ನೀಡದೇ ನಾವು ದಿಢೀರ್ ಜಿಲ್ಲೆಗೆ ಆಗಮಿಸಿ ಆಯಾ ಕಡೆಗಳಲ್ಲಿ ಭೇಟಿ ನಡೆಸಿದ್ದರಿಂದಾಗಿ ಲೋಪಗಳನ್ನು ಪತ್ತೆ ಹಚ್ಚಲು ಸಾಧ್ಯವಾಯಿತು ಎಂದು ಅವರು ಹೇಳಿದರು.

ಆಯೋಗದ ಎಲ್ಲ ಸದಸ್ಯರು ಪರಸ್ಪರ ಚರ್ಚಿಸಿ, ಮೇ 20ರಂದು ಮೂರು ತಂಡಗಳಾಗಿ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಕಾರ್ಯಾಚರಣೆ ನಡೆಸಿದೆವು. ಸದಸ್ಯರಾದ ಮಾರುತಿ ಎಂ ದೊಡ್ಡಲಿಂಗಣ್ಣವರ ಅವರೊಂದಿಗೆ ತಾವು ಕೊಪ್ಪಳ ಸಿಟಿಯ ಗಾಂಧೀನಗರದಲ್ಲಿನ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದಾಗ ಮೊಟ್ಟೆ ಖರೀದಿ ಬಿಲ್ಲುಗಳಲ್ಲಿ ವ್ಯತ್ಯಾಸ ಇರುವುದು, ಗರ್ಭಿಣಿಯರು, ಬಾಣಂತಿಯರ ಮನೆಗೆ ಆಹಾರ ವಿತರಣೆ ವಹಿಯಲ್ಲಿ ವ್ಯತ್ಯಾಸ ಸೇರಿದಂತೆ ಹಲವು ಲೋಪಗಳು ಕಂಡು ಬಂದವು. ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ರೋಗಿಗಳನ್ನು ಮಾತನಾಡಿಸಿದಾಗ ರೋಗಿಗಳಿಗೆ ಚಪಾತಿ ನೀಡದೇ ಇರುವುದು, ನೀಡಿದ ಆಹಾರವು ರುಚಿ ಶುಚಿಯಾಗಿಲ್ಲದಿರುವುದು, ಮರುದಿನಕ್ಕೆ ದಿನಾಂಕ ಮುಕ್ತಾಯವಾಗುವ ಮಸಾಲ ಪದಾರ್ಥಗಳನ್ನು ದಾಸ್ತಾನು ಕೊಠಡಿಯಲ್ಲಿ ಇಟ್ಟಿರುವುದು ಕಂಡು ಬಂದಿತು. ಮಕ್ಕಳ ಆರೈಕೆ ವಿಭಾಗಕ್ಕೆ ಭೇಟಿ ನೀಡಿದಾಗ ಮಕ್ಕಳಿಗೆ ಪೌಷ್ಠಿಕ ಆಹಾರ ನೀಡದೇ ಇರುವುದು ಕಂಡು ಬಂದಿತು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿದ ನರ್ಸಿಂಗ್ ಸೂಪರಿಂಟೆಂಡೆಂಟ್ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಕ್ರಮ ವಹಿಸುವಂತೆ ವೈದ್ಯಕೀಯ ಅಧೀಕ್ಷಕರಿಗೆ ತಿಳಿಸಲಾಗಿದೆ. ಬೋಧಕ ಆಸ್ಪತ್ರೆಗೆ ಕಳಪೆ ಆಹಾರ ಧಾನ್ಯ ಪೂರೈಸುವ ಟೆಂಡರ್‌ನ್ನು ರದ್ದುಗೊಳಿಸಿ, ಗುಣಮಟ್ಟದ ಆಹಾರ ಧಾನ್ಯ ಪೂರೈಸುವವರಿಗೆ ಟೆಂಡರ್ ಕೊಡಲು ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಆಹಾರ ಆಯೋಗದ ಸದಸ್ಯರಾದ ಸುಮಂತ್ ರಾವ್ ಹಾಗೂ ಎ.ರೋಹಿಣಿ ಪ್ರಿಯ ಅವರು ಮೇ 20ರಂದು ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಯಲಬುರ್ಗಾ ಮತ್ತು ಕುಕನೂರು ಪಟ್ಟಣದಲ್ಲಿರುವ ಗೋದಾಮಿಗೆ ಭೇಟಿ ನೀಡಿ ಆಹಾರ ಧಾನ್ಯಗಳ ದಾಸ್ತಾನು ಮತ್ತು ಅಲ್ಲಿನ ಲೆಕ್ಕಪತ್ರ ನಿರ್ವಹಣೆಯ ಪರಿಶೀಲಿಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಸತಿ ನಿಲಯ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಸತಿ ನಿಲಯ, ಕುಕನೂರಿನ ಡಾ. ಬಿ.ಆರ್ ಅಂಬೇಡ್ಕರ್ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಸತಿ ನಿಲಯಕ್ಕೆ ಭೇಟಿ ನೀಡಿದಾಗ ಆಯಾ ಕಡೆಗೆ ಮೂಲ ಸೌಕರ್ಯದ ಕೊರತೆ ಇರುವುದನ್ನು ಸದಸ್ಯರು ಗುರುತಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಎಐ ಬಳಸಿ ಸೈಬರ್ ದಾಳಿ: ಅಪಾಯದತ್ತ ಸಾಗುತ್ತಿರುವ ಜಗತ್ತು



ತಂತ್ರಜ್ಞಾನ ಮಾನವನ ಕೈಯಲ್ಲಿರುವ ಶಕ್ತಿ. ಆದರೆ ಆ ಶಕ್ತಿ ನಿಯಂತ್ರಣ ತಪ್ಪಿದರೆ ಸಮಾಜಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಎಐ ಆಧಾರಿತ ಸೈಬರ್ ದಾಳಿಗಳು ನಮಗೆ ನೀಡುತ್ತಿರುವ ಎಚ್ಚರಿಕೆ ಸ್ಪಷ್ಟ- ಭವಿಷ್ಯದ ಯುದ್ಧಗಳು ಗಡಿಗಳಲ್ಲಿ ಮಾತ್ರ ನಡೆಯುವುದಿಲ್ಲ; ಅವು ಡೇಟಾ, ನೆಟ್‌ವರ್ಕ್ ಮತ್ತು ಡಿಜಿಟಲ್ ಜಗತ್ತಿನೊಳಗೆ ನಡೆಯಲಿವೆ. ಪರಿಣಾಮ- ಊಹೆಗೂ ನಿಲುಕದ್ದು.

ಇತ್ತೀಚೆಗೆ ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್), ಕೃತಕ ಬುದ್ಧಿಮತ್ತೆ(ಎಐ) ಬಳಸಿ ನಡೆಯುತ್ತಿರುವ ಸೈಬರ್ ದಾಳಿ ಅಪಾಯಗಳನ್ನು ಹೆಚ್ಚಿಸುತ್ತಿದೆ, ಹಣಕಾಸು ವಹಿವಾಟು ಕ್ಷೇತ್ರಕ್ಕೆ ದೊಡ್ಡ ಮಟ್ಟದ ಆಪತ್ತು ಎದುರಾಗಲಿದೆ ಎಂದು ಎಚ್ಚರಿಸಿದೆ. ಇದು ಸರಳ ವಿಷಯವಲ್ಲ, ಸಾಮಾನ್ಯ ಸೈಬರ್ ಅಪರಾಧವೂ ಅಲ್ಲ. ದೇಶಕ್ಕೆ, ಪ್ರಪಂಚಕ್ಕೆ ಗಂಭೀರ ಗಂಡಾಂತರ ತರಬಲ್ಲ ಸಂಗತಿ.

ಏಕೆಂದರೆ, ಎಐ ಎನ್ನುವುದು ಅತ್ಯಾಧುನಿಕ ತಂತ್ರಜ್ಞಾನವಾಗಿದೆ. ಅಮೆರಿಕ ಮತ್ತು ಚೈನಾದಂತಹ ಮುಂದುವರೆದ ದೇಶಗಳು ದಿನಕ್ಕೊಂದು ಹೊಸ ಸುಧಾರಿತ- ಚಾಟ್ ಜಿಪಿಟಿ, ಗೂಗಲ್ ಜೆಮಿನಿ, ಆಂಥ್ರೋಪಿಕ್ ಕ್ಲೌಡ್, ಮೆಟಾ ಲಾಮ, ಗ್ರಾಕ್, ಡೀಪ್ ಸೀಕ್- ಎಐ ಮಾದರಿಗಳನ್ನು ಹೊರಜಗತ್ತಿಗೆ ಬಿಡುತ್ತಿವೆ. ಪ್ರತಿಷ್ಠೆ-ಪಾರಮ್ಯ ಮೆರೆಯುತ್ತಿವೆ. ಎಐ ಜನರ ಕೈಗೆ ಸುಲಭವಾಗಿ, ಉಚಿತವಾಗಿ ಸಿಗುತ್ತಿದೆ. ಕೇಳಿದ್ದನ್ನೆಲ್ಲ ಕೊಡುವ ಕಲ್ಪವೃಕ್ಷದಂತಿರುವ ಎಐ ತಂತ್ರಜ್ಞಾನ ಮಾನವ ಜೀವನವನ್ನು ಸುಲಭಗೊಳಿಸುವ ಸಾಧನವಾಗಿದೆ. ಆ ಕಾರಣಕ್ಕೇ ಅವುಗಳನ್ನು ಯಾವ ಎಗ್ಗೂ ಇಲ್ಲದೆ ಬಳಸುತ್ತಿದ್ದಾರೆ. ಹಾಗೆಯೇ ತಾವೇ ಹೆಣೆದುಕೊಂಡ ಬಲೆಯೊಳಗೆ ಬಂಧಿಯಾಗುತ್ತಿದ್ದಾರೆ.

ಕಲಿತವರು ಕ್ಷಣಮಾತ್ರದಲ್ಲಿ ಕರವಸ್ತ್ರದಿಂದ ಹಿಡಿದು ಕಂಡರಿಯದ ಅಮೆಜಾನ್ ಕಾಡಿನವರೆಗೆ ಎಐ ಕೇಳುತ್ತಿದ್ದಾರೆ, ಮಾಹಿತಿ ಪಡೆಯುತ್ತಿದ್ದಾರೆ. 14ರಿಂದ 24ರವರೆಗಿನ ಹೊಸ ತಲೆಮಾರಿನ ಜನ ಎಐನೊಂದಿಗೆ ಸಂಭಾಷಣೆ ನಡೆಸಿ ನಂತರ ತಮ್ಮ ಆಯ್ಕೆ- ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಸರ್ಚ್ ಎಂಜಿನ್‌ಗಳಿಗೆ ಪ್ರವೇಶಿಸುವ ಮುನ್ನ ಎಐ ಟೂಲ್‌ಗಳತ್ತ ಮುಖ ಮಾಡುತ್ತಿದ್ದಾರೆ. ಎಐ ಬಳಸುವುದು ಒಂದು ರೀತಿಯಲ್ಲಿ ಓನರ್ಸ್ ಪ್ರೈಡ್, ನೇಬರ್ಸ್ ಎನಿಮಿ ಎಂಬಂತಾಗಿದೆ. ಹೀಗಾಗಿ ಎಐ ತಂತ್ರಜ್ಞಾನ ಪ್ರಪಂಚದಾದ್ಯಂತ ಅತ್ಯಂತ ವೇಗವಾಗಿ ತನ್ನ ಜಾಲವನ್ನು ವಿಸ್ತರಿಸುತ್ತಿದೆ. ಹಿಡಿತವನ್ನು ಬಿಗಿಗೊಳಿಸುತ್ತಿದೆ.

ಹೊಸ ತಂತ್ರಜ್ಞಾನ ಯಾವಾಗಲೂ, ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತದೆ; ಅನುಕೂಲಕ್ಕೆ ಒದಗಿ ಬರುತ್ತದೆ ಎಂದು ಹೇಳುವ ಸ್ಥಿತಿಯಲ್ಲಿ ಈಗ ಯಾರೂ ಇಲ್ಲ. ಎಐ ತಂತ್ರಜ್ಞಾನ ಸಾಮಾನ್ಯರಿಗಷ್ಟೇ ಅಲ್ಲ, ಸೈಬರ್ ದಾಳಿಕೋರರಿಗೂ ಅನುಕೂಲಕರ ವಾತಾವರಣವನ್ನು ನಿರ್ಮಿಸುತ್ತಿದೆ ಎಂದು ಐಎಂಎಫ್ ಹೇಳುತ್ತಿರುವುದರಲ್ಲಿ ಸುಳ್ಳು ಇಲ್ಲ. ಸೈಬರ್ ದಾಳಿಗಳನ್ನು ಇನ್ನಷ್ಟು ವೇಗವಾಗಿ, ಕಡಿಮೆ ಖರ್ಚಿನಲ್ಲಿ ಮತ್ತು ಹೊಸವಿಧಾನದಲ್ಲಿ ಕೂತಲ್ಲೇ ಕಾರ್ಯಾಚರಿಸಲು ಎಐ ನೆರವಾಗುತ್ತಿದೆ. ಸೈಬರ್ ದಾಳಿಕೋರರು, ಸುಧಾರಿತ ಎಐ ಮಾದರಿಗಳ ಮೂಲಕ ಸಾಫ್ಟ್‌ವೇರ್ ದೌರ್ಬಲ್ಯಗಳನ್ನು ಕ್ಷಣಾರ್ಧದಲ್ಲಿ ಪತ್ತೆಹಚ್ಚುವ, ಹ್ಯಾಕ್ ಮಾಡುವ ನಿಪುಣರಾಗಿದ್ದಾರೆ.

ಈಗ ಎಐ ಮಾದರಿಗಳು ಕೆಲವೇ ನಿಮಿಷಗಳಲ್ಲಿ ಸಾವಿರಾರು ವ್ಯವಸ್ಥೆಗಳನ್ನು ಸ್ಕ್ಯಾನ್ ಮಾಡಬಲ್ಲವು. ದುರ್ಬಲ ದಾರಿಯನ್ನು ಪತ್ತೆಹಚ್ಚಬಲ್ಲವು. ಇ-ಮೇಲ್, ಧ್ವನಿ, ವೀಡಿಯೊ, ಬ್ಯಾಂಕ್ ಮೆಸೇಜ್‌ಗಳಂತೆ ಕಾಣುವ ಮೋಸದ ಲಿಂಕ್‌ಗಳು- ಈಗ ಎಐ ಮೂಲಕ ಕ್ಷಣಾರ್ಧದಲ್ಲಿ ಸೃಷ್ಟಿಯಾಗುತ್ತಿವೆ. ಇದರಿಂದ ಸೈಬರ್ ಅಪರಾಧದ ಸ್ವರೂಪವೇ ಬದಲಾಗಿದೆ. ಹಿಂದೆ ಹ್ಯಾಕರ್ ಎಂದರೆ ತಂತ್ರಜ್ಞಾನದ ಪರಿಣಿತ ಎನ್ನಲಾಗುತ್ತಿತ್ತು. ಈಗ ಸಾಮಾನ್ಯ ವ್ಯಕ್ತಿಯೂ ಕೆಲ ಎಐ ಸಾಧನಗಳನ್ನು ಬಳಸಿ ವಂಚನೆ ನಡೆಸುವ ಮಟ್ಟಿಗೆ ಪರಿಸ್ಥಿತಿ ಬದಲಾಗಿದೆ. ಇದು ಅಪರಾಧದ ಸ್ವರೂಪವನ್ನು ಬದಲಿಸಿದೆ, ಅಪಾಯದ ಗಂಭೀರತೆಯನ್ನು ಹೆಚ್ಚಿಸಿದೆ. ಏಕೆಂದರೆ, ಎಐಗೆ ಸರಿ-ತಪ್ಪುಗಳ ವಿವೇಚನೆ ಇಲ್ಲ. ಬಳಸುವವರ ಉದ್ದೇಶಕ್ಕೆ ಮಿತಿಯೂ ಇಲ್ಲ.

ಭಾರತದಂತಹ ಡಿಜಿಟಲ್ ಆರ್ಥಿಕತೆಯತ್ತ ವೇಗವಾಗಿ ಮುನ್ನುಗ್ಗುತ್ತಿರುವ ದೇಶಗಳಿಗೆ; ಯುಪಿಐ, ಮೊಬೈಲ್ ಬ್ಯಾಂಕಿಂಗ್, ಡಿಜಿಟಲ್ ವಹಿವಾಟು, ಫಿನ್‌ಟೆಕ್ ಸೇವೆಗಳೆಲ್ಲವೂ ಜೀವನದ ಅವಿಭಾಜ್ಯ ಅಂಗಗಳಾಗಿರುವಾಗ; ಅನಕ್ಷರಸ್ಥರು, ಗ್ರಾಮೀಣ ಜನರು ಕೂಡ ಇಂದು ಮೊಬೈಲ್ ಮೂಲಕ ಹಣ ವರ್ಗಾವಣೆ ಮಾಡುತ್ತಿರುವ ಸಂದರ್ಭದಲ್ಲಿ ಎಐ ಆಧಾರಿತ ಸೈಬರ್ ದಾಳಿಗೆ ದಿಡ್ಡಿಬಾಗಿಲು ತೆರೆದಂತಾಗಿದೆ. ಭಾರೀ ಅನಾಹುತಕ್ಕೆ ಆಹ್ವಾನವಿತ್ತಂತಾಗಿದೆ.

2024ರಲ್ಲಿ ನಡೆದ ರ‍್ಯಾನ್ಸಂವೇರ್ ಎಂಬ ಸೈಬರ್ ದಾಳಿಯಿಂದ ಸುಮಾರು 300 ಸಣ್ಣ ಭಾರತೀಯ ಬ್ಯಾಂಕ್‌ಗಳ ಪಾವತಿ ವ್ಯವಸ್ಥೆಗಳು ಸ್ಥಗಿತಗೊಂಡಿದ್ದರೆ; 2025ರಲ್ಲಿ ಎಸ್‌ಬಿಐನಲ್ಲಿ ಸುಮಾರು 15,956 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿ, 118 ಕೋಟಿಗೂ ಹೆಚ್ಚು ನಷ್ಟವಾಗಿತ್ತು. ಕಳೆದ ವರ್ಷವೊಂದರಲ್ಲಿಯೇ ಸೈಬರ್ ಅಪರಾಧಗಳಿಂದ ಉಂಟಾದ ಹಣಕಾಸು ನಷ್ಟವು ಸುಮಾರು 22,845 ಕೋಟಿ ಎಂದು ಅಂದಾಜಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಓಟಿಪಿ ವಂಚನೆ, ಡಿಜಿಟಲ್ ಅರೆಸ್ಟ್ ಮೋಸ, ನಕಲಿ ಕೆವೈಸಿ ಕರೆಗಳು, ಧ್ವನಿ ನಕಲಿ ವಂಚನೆಗಳು, ಹನಿ ಟ್ರ್ಯಾಪ್‌ಗಳು ಹೆಚ್ಚುತ್ತಿರುವುದು- ಎಐ ತಂತ್ರಜ್ಞಾನ ಕ್ರಿಮಿನಲ್‌ಗಳ ಕೈಗೆ ಸಿಕ್ಕಿದ ಪರಿಣಾಮಗಳೇ. ಈಗ ಇದೆಲ್ಲ ಸಣ್ಣ ಅಪರಾಧಗಳು. ಅಕಸ್ಮಾತ್ ಎಐ ಬಳಸಿ ಒಂದು ದೊಡ್ಡ ಸೈಬರ್ ದಾಳಿ ನಡೆದರೆ, ಅದು ಕೇವಲ ಬ್ಯಾಂಕ್ ಖಾತೆಗಳಿಗೆ ಮಾತ್ರವಲ್ಲ; ದೇಶದ ಅರ್ಥ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆಯಿದೆ. ಮುಂದುವರೆದು, ಡೀಪ್‌ಫೇಕ್ ವೀಡಿಯೊಗಳ ಮೂಲಕ ರಾಜಕೀಯ ಅಸ್ಥಿರತೆ ಸೃಷ್ಟಿಸುವ ಅಪಾಯವೂ ಇದೆ.

ಸೈಬರ್ ದಾಳಿಗಳು ಈಗ ಕೇವಲ ವೈಯಕ್ತಿಕ ಸಮಸ್ಯೆಯಲ್ಲ; ಅದು ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಸ್ಥಿರತೆಯ ಪ್ರಶ್ನೆಯಾಗಿದೆ. ವಿದ್ಯುತ್ ವ್ಯವಸ್ಥೆ, ವಿಮಾನ ನಿಲ್ದಾಣ, ಆಸ್ಪತ್ರೆ, ಬ್ಯಾಂಕಿಂಗ್, ಷೇರು ಮಾರುಕಟ್ಟೆಗಳೆಲ್ಲವೂ ಡಿಜಿಟಲ್ ಜಾಲಗಳನ್ನು ಅವಲಂಬಿಸಿವೆ. ಇವುಗಳ ಮೇಲೆ ನಡೆಯುವ ದಾಳಿ ವ್ಯವಸ್ಥೆಯನ್ನೇ ಅಸ್ತವ್ಯಸ್ತಗೊಳಿಸಬಹುದು. ಯುದ್ಧದ ಕಾಲದಲ್ಲಿ ಬಾಂಬ್‌ಗಳಿಗಿಂತಲೂ ದೊಡ್ಡ ಪರಿಣಾಮವನ್ನು ಸೈಬರ್ ದಾಳಿಗಳು ಉಂಟುಮಾಡುವ ಸಾಧ್ಯತೆ ಇದೆ ಎಂದು ಜಾಗತಿಕ ತಜ್ಞರು ಎಚ್ಚರಿಕೆ ನೀಡುತ್ತಿದ್ದಾರೆ.

ಎಐ ಅಪಾಯಕಾರಿ ಆಗಿರುವಷ್ಟೇ ಪರಿಹಾರವೂ ಆಗಬಹುದು. ವಂಚನೆ ಪತ್ತೆಹಚ್ಚುವುದು, ಅನುಮಾನಾಸ್ಪದ ಚಟುವಟಿಕೆ ಗುರುತಿಸುವುದು, ದಾಳಿ ನಡೆಯುವ ಮುನ್ನವೇ ಎಚ್ಚರಿಸುವುದು- ಇವೆಲ್ಲಕ್ಕೂ ಎಐ ಬಳಕೆಯಾಗುತ್ತಿದೆ. ಹೀಗಾಗಿ ಪ್ರಶ್ನೆ ಎಐ ಒಳ್ಳೆಯದೇ ಕೆಟ್ಟದ್ದೇ ಎನ್ನುವುದಲ್ಲ; ಅದನ್ನು ಯಾರು, ಹೇಗೆ ಬಳಸುತ್ತಾರೆ ಎನ್ನುವುದಾಗಿದೆ.

ಇದಕ್ಕಾಗಿ ಸರ್ಕಾರಗಳು, ಬ್ಯಾಂಕುಗಳು ಮತ್ತು ತಂತ್ರಜ್ಞಾನ ಸಂಸ್ಥೆಗಳು ಕೇವಲ ಲಾಭದ ದೃಷ್ಟಿಯಿಂದ ಡಿಜಿಟಲ್ ವಿಸ್ತರಣೆಗೆ ಒತ್ತುಕೊಡುವುದನ್ನು ಬಿಟ್ಟು, ಭದ್ರತೆ ಮತ್ತು ಸುರಕ್ಷತೆಯತ್ತಲೂ ಗಮನ ಹರಿಸಬೇಕಾಗಿದೆ. ಸೈಬರ್ ಭದ್ರತೆಯನ್ನು ಐಟಿ ವಿಭಾಗದ ಜವಾಬ್ದಾರಿಯ ಬದಲು, ರಾಷ್ಟ್ರೀಯ ನೀತಿಯಾಗಬೇಕಾಗಿದೆ. ಶಾಲಾ ಹಂತದಿಂದಲೇ ಡಿಜಿಟಲ್ ಸಾಕ್ಷರತೆ ಮತ್ತು ಸೈಬರ್ ಜಾಗೃತಿ ಬಗ್ಗೆ ತಿಳಿವಳಿಕೆ ತುಂಬಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಳೆದ ವರ್ಷ, ಜವಾಬ್ದಾರಿಯಿಂದ ಎಐ ಬಳಸುವ ಬಗ್ಗೆ ಪ್ರಸ್ತಾಪಿಸಿತ್ತು. ಇದರ ಉದ್ದೇಶ ಆಡಳಿತ, ಪಾರದರ್ಶಕತೆ, ಲೆಕ್ಕಪರಿಶೋಧನೆ ಮತ್ತು ಸೈಬರ್ ಭದ್ರತೆಗಳಲ್ಲಿ ಕಟ್ಟುನಿಟ್ಟಿನ ರಕ್ಷಣಾತ್ಮಕ ಕ್ರಮಗಳೊಂದಿಗೆ ಎಐ ಬಳಕೆಯನ್ನು ಜಾರಿಗೊಳಿಸುವುದಾಗಿತ್ತು. ಆದರೂ ಇಂದಿಗೂ ಜನ ಜಾಗೃತರಾದಂತೆ ಕಾಣುತ್ತಿಲ್ಲ. ಪ್ರತಿದಿನ ಸೈಬರ್ ಅಪರಾಧ ಕೃತ್ಯಗಳು ದಾಖಲಾಗುವುದು ನಿಂತಿಲ್ಲ.

ತಂತ್ರಜ್ಞಾನ ಮಾನವನ ಕೈಯಲ್ಲಿರುವ ಶಕ್ತಿ. ಆದರೆ ಆ ಶಕ್ತಿ ನಿಯಂತ್ರಣ ತಪ್ಪಿದರೆ ಸಮಾಜಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಎಐ ಆಧಾರಿತ ಸೈಬರ್ ದಾಳಿಗಳು ನಮಗೆ ನೀಡುತ್ತಿರುವ ಎಚ್ಚರಿಕೆ ಸ್ಪಷ್ಟ- ಭವಿಷ್ಯದ ಯುದ್ಧಗಳು ಗಡಿಗಳಲ್ಲಿ ಮಾತ್ರ ನಡೆಯುವುದಿಲ್ಲ; ಅವು ಡೇಟಾ, ನೆಟ್‌ವರ್ಕ್ ಮತ್ತು ಡಿಜಿಟಲ್ ಜಗತ್ತಿನೊಳಗೆ ನಡೆಯಲಿವೆ. ಪರಿಣಾಮ- ಊಹೆಗೂ ನಿಲುಕದ್ದು.

ಉತ್ತರ ಭಾರತದಲ್ಲಿ ಮೊಳಗುತ್ತಿದೆ ಕಾರ್ಮಿಕ ಘೋಷ; ಮಾರ್ಚ್, ಏಪ್ರಿಲ್, ಮೇ ದಂಗೆಯ ಮಾಸಗಳು

ಭಾರತದಲ್ಲಿ 35 ವರ್ಷಗಳ ಹಿಂದೆ (1991) ಎಲ್‌ಪಿಜಿ (ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ) ನೀತಿಯನ್ನು ಹೇರಲಾಯಿತು. ಆನಂತರದಲ್ಲಿ, ಕಾರ್ಮಿಕ ವಲಯವು ಹಲವು ರೀತಿಯಲ್ಲಿ ಸ್ಥಿತ್ಯಂತರಗಳನ್ನು ಕಂಡಿದೆ. ಶೋಷಣೆ, ದಬ್ಬಾಳಿಕೆಗಳನ್ನು ಎದುರಿಸಿದೆ. ಗಟ್ಟಿ ದನಿಯನ್ನು ಹೋರಾಟ ನಡೆಸಿದೆ. ಈಗ, ಕಾರ್ಮಿಕ ಹೋರಾಟವು ತೀವ್ರವಾಗಿ ಪುಟುದೇಳುತ್ತಿದೆ. ಕಾರ್ಮಿಕ ಕಿಚ್ಚಿನ ಹೊಸ ಅಲೆಯನ್ನು ಸೃಷ್ಟಿಸಿದೆ. ದೇಶದ ಕೈಗಾರಿಕಾ ಮತ್ತು ಇಂಧನ ವಲಯದಲ್ಲಿ ಕಾರ್ಮಿಕ ಶಕ್ತಿಯು ಜಾಗೃತವಾಗುತ್ತಿದ್ದು, ಸರಣಿ ಮುಷ್ಕರಗಳಲ್ಲಿ ತೊಡಗಿದೆ. ಕಾರ್ಮಿಕ ದಿನವನ್ನಾಚರಿಸುವ ಮೇ ತಿಂಗಳಿನಲ್ಲಿ ಬೃಹತ್ ಹೋರಾಟಗಳು ನಡೆಯುತ್ತಿವೆ.

ಈ ವರ್ಷ, ಕಾರ್ಮಿಕ ಹೋರಾಟದ ಕಿಡಿ ಏಪ್ರಿಲ್ ಆರಂಭದಲ್ಲಿ ಹರಿಯಾಣದ ಮಾನೇಸರ್ ಕೈಗಾರಿಕಾ ವಲಯದ ಕಾರ್ಖಾನೆಗಳಿಂದ ದೊಡ್ಡ ಮಟ್ಟದಲ್ಲಿ ಭುಗಿಲೆದ್ದಂತೆ ಕಾಣುತ್ತಿದೆ. ಆದರೆ, ಈ ಕಿಚ್ಚಿನ ಮುನ್ಸೂಚನೆಯ ಹೊಗೆ ಜನವರಿ ಮತ್ತು ಮಾರ್ಚ್ ತಿಂಗಳಿನಿಂದಲೇ ಹಲವು ಭಾಗಗಳಲ್ಲಿ ಕಾಣಿಸಿಕೊಂಡಿತ್ತು. ವಿಶೇಷವಾಗಿ, ಹರಿಯಾಣದ ಪಾಣಿಪತ್ ತೈಲ ಸಂಸ್ಕರಣಾಗಾರದಲ್ಲಿ (ರಿಫೈನರಿ) ಕಟ್ಟಡ ಕಾರ್ಮಿಕರು ನಡೆಸಿದ ಬೃಹತ್ ಪ್ರತಿಭಟನೆಯಿಂದ ಹೋರಾಟದ ಮೊದಲ ಕಿಡಿ ಹೊರಹೊಮ್ಮಿತ್ತು. ನಂತರ, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ದೇಶವ್ಯಾಪಿ ಬೃಹತ್ ಹೋರಾಟಗಳಿಗೆ ಮುನ್ನುಡಿಯನ್ನೂ ಬರೆಯಿತು. ಪಾಣಿಪತ್‌ನ ಪ್ರತಿಭಟನೆಯು ದೇಶದ ಮೂಲೆ ಮೂಲೆಗಳಿಗೂ ಪಸರಿಸುವ ಮೂಲಕ, ದೇಶವ್ಯಾಪಿ ಮುಷ್ಕರಗಳು ಭುಗಿಲೇಳಲು ಕಾರ್ಮಿಕರನ್ನು ಪ್ರೇರೇಪಿಸಿತು.

ಕಾರ್ಮಿಕ ದಂಗೆಯ ಬಿರುಗಾಳಿ

ಬೃಹತ್ ಕಾರ್ಮಿಕ ಆಕ್ರೋಶವು ದಿಢೀರನೆ ಸಂಭವಿಸಿದುದಲ್ಲ, ಬದಲಿಗೆ ದೇಶದ ಪ್ರಮುಖ ಮೂಲಸೌಕರ್ಯ ಮತ್ತು ಇಂಧನ ಯೋಜನೆಗಳಲ್ಲಿ ತಿಂಗಳುಗಳಿಂದ ಹೆಪ್ಪುಗಟ್ಟಿದ್ದ ಅಸಮಾಧಾನ-ಆಕ್ರೋಶದ ಫಲವಾಗಿದೆ. ಉತ್ತರ ಪ್ರದೇಶದ ಸೋನ್‌ಭದ್ರಾದಲ್ಲಿರುವ ಓಬ್ರಾ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಕಟ್ಟಡ ಕಾರ್ಮಿಕರು ದೀರ್ಘಕಾಲದಿಂದ ತಡೆಹಿಡಿಯಲಾಗಿದ್ದ ವೇತನದ ಪಾವತಿಗೆ ಆಗ್ರಹಿಸಿ ಜನವರಿ 14 ರಂದು ಮೊದಲ ಬಾರಿಗೆ ಮುಷ್ಕರದ ಹಾದಿ ಹಿಡಿದರು. ಇದೇ ಕಾರ್ಮಿಕರು ಆಡಳಿತ ಮಂಡಳಿಯ ಉದಾಸೀನತೆಯ ವಿರುದ್ಧ ಮಾರ್ಚ್ 24 ರಂದು ಮತ್ತೊಮ್ಮೆ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆಗಿಳಿದರು.

ಅದೇ ಸಮಯದಲ್ಲಿ, ಫೆಬ್ರವರಿ 2ರಂದು, ಬಿಹಾರದ ಬೇಗುಸರಾಯ್‌ನಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಶನ್‌ನ () ಗುತ್ತಿಗೆ ಕಾರ್ಮಿಕರು ಕೇವಲ ಕಾಗದದ ಮೇಲಿರುವ ತಮ್ಮ ಕಾನೂನಾತ್ಮಕ ಹಕ್ಕುಗಳಾದ ಕನಿಷ್ಠ ವೇತನ, ಗುರುತಿನ ಚೀಟಿ, ಕೆಲಸದ ಸ್ಥಳದಲ್ಲಿ ಸುರಕ್ಷತೆ, ಇಎಸ್‌ಐ ಮತ್ತು ಪಿಎಫ್ ಭದ್ರತೆ ಹಾಗೂ ಕುಡಿಯುವ ನೀರು, ಶೌಚಾಲಯದಂತಹ ಕನಿಷ್ಠ ಮಾನವೀಯ ಸೌಲಭ್ಯಗಳಿಗಾಗಿ ಮುಷ್ಕರ ಹೂಡಿದರು. ಆದರೆ, ಅವರ ಧ್ವನಿಯನ್ನು ಅಡಗಿಸಲು ಆಡಳಿತ ಮಂಡಳಿಯು ಬೌನ್ಸರ್‌ಗಳನ್ನು ಬಳಸಿ ಬೆದರಿಕೆ ಹಾಕಿತು, ಕಾರ್ಮಿಕ ಮುಖಂಡರನ್ನು ಬಂಧಿಸಿ, ಕಾರ್ಮಿಕರ ವಿರುದ್ಧ ದಮನಕಾರಿ ನೀತಿ ಅನುಸರಿಸಿತು.

ಫೆಬ್ರವರಿ 22 ರಂದು ಹರಿಯಾಣದ ಪಾಣಿಪತ್‌ನಲ್ಲಿರುವ ಐಒಸಿಎಲ್ ಸಂಸ್ಕರಣಾಗಾರದಲ್ಲಿ ಲಾರ್ಸೆನ್ ಅಂಡ್ ಟೂಬ್ರೊ () ಸೇರಿದಂತೆ ವಿವಿಧ ಕಂಪನಿಗಳಲ್ಲಿ ದುಡಿಯುತ್ತಿದ್ದ ಇಬ್ಬರು ಕಟ್ಟಡ ಕಾರ್ಮಿಕರು ಸುರಕ್ಷತಾ ಕೊರತೆಯಿಂದಾಗಿ ಸಾವನ್ನಪ್ಪಿದರು. ಈ ಘಟನೆಯು ಕಾರ್ಮಿಕರ ಆಕ್ರೋಶವನ್ನು ಚಿಮ್ಮಿಸಿತು. ಆಕ್ರೋಶಗೊಂಡ 30 ರಿಂದ 40 ಸಾವಿರದಷ್ಟು ಬೃಹತ್ ಸಂಖ್ಯೆಯ ನಿರ್ಮಾಣ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ರಸ್ತೆಗಿಳಿದರು. ಅವರು ಕೇವಲ ಪರಿಹಾರಕ್ಕೆ ಆಗ್ರಹಿಸಲಿಲ್ಲ, ಬದಲಿಗೆ ದಿನನಿತ್ಯದ 8 ಗಂಟೆಗಳ ನಿಯಮಿತ ಕೆಲಸದ ಅವಧಿ, ಭಾನುವಾರದ ರಜೆ ಹಾಗೂ ಹೆಚ್ಚುವರಿ ಕೆಲಸಕ್ಕೆ (ಓವರ್‌ಟೈಮ್) ಕಾನೂನುಬದ್ಧವಾಗಿ ಸಿಗಬೇಕಾದ ದುಪ್ಪಟ್ಟು ವೇತನಕ್ಕಾಗಿಯೂ ಒತ್ತಾಯಿಸಿದರು.

ಕಾರ್ಮಿಕರ ಧರಣಿಯನ್ನು ಹತ್ತಿಕ್ಕಲು ಕಂಪನಿಗಳ ಆಡಳಿತ ಮಂಡಳಿಗರು ಪೊಲೀಸರಿಂದ ತೀವ್ರ ಲಾಠಿ ಪ್ರಹಾರ ನಡೆಸಿದರು. ಮಾತ್ರವಲ್ಲದೆ, ಸುಮಾರು 2,900 ಕಾರ್ಮಿಕರ ವಿರುದ್ಧ ಸಾಮೂಹಿಕ ಪ್ರಕರಣಗಳನ್ನು ದಾಖಲಿಸಿದರು. ಆದರೆ, ಈ ಹೋರಾಟದ ಕಿಡಿ ತಣ್ಣಗಾಗುವ ಬದಲು ನೆರೆಯ ರಾಜ್ಯಗಳಿಗೂ ಹರಡಿತು.

ಫೆಬ್ರವರಿ 26ರಂದು ಗುಜರಾತ್‌ನ ಸೂರತ್‌ನಲ್ಲಿರುವ ಆರ್ಸೆಲರ್ ಮಿತ್ತಲ್ ನಿಪ್ಪಾನ್ ಸ್ಟೀಲ್ ಸಂಸ್ಥೆಯ 2,000 ಕಾರ್ಮಿಕರು ಪಾಣಿಪತ್ ಹೋರಾಟದಿಂದ ಪ್ರೇರಿತರಾಗಿ 8 ಗಂಟೆಗಳ ಕೆಲಸದ ಅವಧಿ ಮತ್ತು ಪ್ರತಿ ತಿಂಗಳ 7ನೇ ತಾರೀಖಿನೊಳಗೆ ವೇತನ ಪಾವತಿಯಾಗಬೇಕೆಂದು ಮುಷ್ಕರ ಆರಂಭಿಸಿದರು. ಇಲ್ಲಿಯೂ ಸಹ ಆಡಳಿತ ವ್ಯವಸ್ಥೆಯು ಕಾರ್ಮಿಕರ ವಿರುದ್ಧ ಕೊಲೆ ಯತ್ನದಂತಹ ಆರೋಪ ಮಾಡಿ, ಕಠಿಣ ಕಾಯ್ದೆಗಳನ್ನು ಹೇರಿ 40 ಕಾರ್ಮಿಕರನ್ನು ಜೈಲಿಗಟ್ಟಿತು.

ಇದೇ ಅವಧಿಯಲ್ಲಿ ಗುಜರಾತ್‌ನ ವಾಪಿಯಲ್ಲಿರುವ ರಿಲಯನ್ಸ್ ಗ್ರೂಪ್‌ಗೆ ಸೇರಿದ ಅಲೋಕ್ ಇನ್ಫ್ರಾಸ್ಟ್ರಕ್ಚರ್ಸ್ ಮತ್ತು ಭರೂಚ್‌ನ ಏಷ್ಯನ್ ಪೇಂಟ್ಸ್ ಕಾರ್ಮಿಕರು ಮೂಲಭೂತ ಸೌಕರ್ಯ ಮತ್ತು ನಿಗದಿತ ವೇತನಕ್ಕಾಗಿ ಮುಷ್ಕರ ಆರಂಭಿಸಿದರು. ಮಧ್ಯಪ್ರದೇಶದ ಬೆತುಲ್‌ನಲ್ಲಿ ವೆಸ್ಟರ್ನ್ ಕೋಲ್‌ಫೀಲ್ಡ್ಸ್‌ನ ಗುತ್ತಿಗೆ ಕಾರ್ಮಿಕರು ತಮಗೆ 4 ತಿಂಗಳಿಂದ ಸಂಬಳ ನೀಡದ ಗುತ್ತಿಗೆದಾರರ ವಿರುದ್ಧ 15 ದಿನಗಳ ಕಾಲ ಸರಣಿ ಉಪವಾಸ ಸತ್ಯಾಗ್ರಹ ನಡೆಸಿದರು.

ಜಾರ್ಖಂಡ್‌ನ ಗಮ್ಹಾರಿಯಾ ಕೈಗಾರಿಕಾ ವಲಯದಲ್ಲಿ ಭಾರತ್ ಇಂಜಿನಿಯರಿಂಗ್ ಬಾಡಿ ಬಿಲ್ಡಿಂಗ್ ಕಂಪನಿಯ ಕಾರ್ಮಿಕರು ಇಎಸ್‌ಐ-ಪಿಎಫ್ ಸೌಲಭ್ಯ ಕೇಳಿದಾಗ ಮಾರ್ಚ್ 2 ರಂದು ಆಡಳಿತ ಮಂಡಳಿಯ ಬೌನ್ಸರ್‌ಗಳು ಅವರ ಮೇಲೆ ದೈಹಿಕ ಹಲ್ಲೆ ನಡೆಸಿದರು. ಹೋರಾಟವನ್ನು ಹತ್ತಿಕ್ಕಲು ಕಂಪನಿ ಆಡಳಿತ ಯತ್ನಿಸಿತು.

ರಾಜಸ್ಥಾನದ ಕೋಟಾದಲ್ಲಿ ಚಂಬಲ್ ಫರ್ಟಿಲೈಸರ್ಸ್ ಕಾರ್ಮಿಕರು 26 ನಿಗದಿತ ಕೆಲಸದ ದಿನಗಳ ಭರವಸೆಗಾಗಿ ಮುಷ್ಕರ ನಡೆಸಿದರು. ಹೋರಾಟದ ಕಿಚ್ಚು ಹೆಚ್ಚುತ್ತಿದ್ದಂತೆಯೇ, ಕಾರ್ಮಿಕ ಇಲಾಖೆ ಮಧ್ಯಪ್ರವೇಶಿಸಿತು. ಗುತ್ತಿಗೆ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ 26 ದಿನಗಳ ಕಾಲ ಕಡ್ಡಾಯವಾಗಿ ಕೆಲಸ ನೀಡಲು ಮತ್ತು 8 ಗಂಟೆಗಳ ಕೆಲಸದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕಾರ್ಮಿಕ ಕಾಯ್ದೆಯನ್ವಯ ದುಪ್ಪಟ್ಟು ವೇತನ ಪಾವತಿಸಲು ಕಂಪನಿ ಒಪ್ಪಿಕೊಂಡಿತು.

ಅಂತೆಯೇ, ಮಧ್ಯಪ್ರದೇಶದ ರೇವಾನಲ್ಲಿರುವ ಅಲ್ಟ್ರಾಟೆಕ್ ಸಿಮೆಂಟ್ ಸಂಸ್ಥೆಯು 300 ಸ್ಥಳೀಯ ಕಾರ್ಮಿಕರನ್ನು ವಜಾಗೊಳಿಸಿ ಹೊರಗಿನವರನ್ನು ನೇಮಿಸಿಕೊಳ್ಳಲು ಮುಂದಾದಾಗ ಸ್ಥಳೀಯ ಕಾರ್ಮಿಕರು ಫ್ಯಾಕ್ಟರಿ ಗೇಟ್ ಬಂದ್ ಮಾಡಿ ಪ್ರತಿಭಟಿಸಿದರು. ಈ ಪ್ರತಿಭಟನೆಯ ಪ್ರಭಾವ ಎಷ್ಟಿತ್ತೆಂದರೆ, ಮಾರ್ಚ್ 16 ರಂದು ಜಾರ್ಖಂಡ್ ಮತ್ತು ಆಂಧ್ರಪ್ರದೇಶದ ಅಲ್ಟ್ರಾಟೆಕ್ ಸ್ಥಾವರಗಳ ಕಾರ್ಮಿಕರು ಸಹ ಸ್ವಯಂಪ್ರೇರಿತರಾಗಿ ಮುಷ್ಕರಕ್ಕೆ ಕೈಜೋಡಿಸಿದರು. ಪ್ರತಿಭಟನೆಗಿಳಿದರು.

ದೇಶದ ಮೂರು ಪ್ರಮುಖ ರಾಜ್ಯಗಳಲ್ಲಿ ಏಕಕಾಲಕ್ಕೆ ಮುಷ್ಕರದ ಬಿಸಿ ತಟ್ಟಿದ್ದರಿಂದ ಅಲ್ಟ್ರಾಟೆಕ್ ಸಿಮೆಂಟ್ ಆಡಳಿತ ಮಂಡಳಿಯು ಕಾರ್ಮಿಕರ ಹೋರಾಟಕ್ಕೆ ಮಣಿಯಿತು. ಸ್ಥಳೀಯ ಕಾರ್ಮಿಕ ಮುಖಂಡರು, ಜಿಲ್ಲಾ ಆಡಳಿತ ಹಾಗೂ ಕಂಪನಿಯ ಪ್ರತಿನಿಧಿಗಳ ನಡುವೆ ಸುದೀರ್ಘ ಸಭೆ ನಡೆಸಿ, ಕಾರ್ಮಿಕರ ಪ್ರಮುಖ ಬೇಡಿಕೆಗಳಿಗೆ ಭಾಗಶಃ ಒಪ್ಪಿಗೆ ನೀಡಿತು. ವಜಾಗೊಳಿಸಲಾಗಿದ್ದ ಸ್ಥಳೀಯ ಕಾರ್ಮಿಕರನ್ನು ಹಂತಹಂತವಾಗಿ ಮರುನೇಮಕ ಮಾಡಿಕೊಳ್ಳಲು ಮತ್ತು ಮುಂದಿನ ದಿನಗಳಲ್ಲಿ ಸ್ಥಳೀಯ ಉದ್ಯೋಗಿಗಳಿಗೆ ಮೊದಲ ಆದ್ಯತೆ ನೀಡಲು ಕಂಪನಿಯು ಒಪ್ಪಿಕೊಂಡಿತು.

ಮಾರ್ಚ್ ತಿಂಗಳ ಮಧ್ಯಭಾಗದಲ್ಲಿ ದೇಶದ ಪ್ರಮುಖ ಇಂಧನ ಮತ್ತು ವಿದ್ಯುತ್ ದೈತ್ಯರಾದ ಅದಾನಿ ಮತ್ತು ವೇದಾಂತ ಸಮೂಹದ ಸಂಸ್ಥೆಗಳಿಗೂ ಕಾರ್ಮಿಕ ಮುಷ್ಕರದ ಬಿಸಿ ತಟ್ಟಿತು.



ಮಾರ್ಚ್ 12ರಂದು ಛತ್ತೀಸ್‌ಗಢದ ವೇದಾಂತ ಪವರ್ ಮತ್ತು ರಾಜಸ್ಥಾನದ ಚಿತ್ತೋರ್‌ಗಢದ ಹಿಂದುಸ್ತಾನ್ ಜಿಂಕ್ (ವೇದಾಂತ ಸಂಸ್ಥೆ) ಕಾರ್ಮಿಕರು ಮುಷ್ಕರ ಹೂಡಿದರು. ಭಾರತದಲ್ಲಿನ ಗಣಿಗಾರಿಕೆ ಮತ್ತು ಇಂಧನ ವಲಯದಲ್ಲಿ ಗುತ್ತಿಗೆ ಕಾರ್ಮಿಕರ ಮೇಲಿನ ವ್ಯವಸ್ಥಿತ ಶೋಷಣೆ, ವೇತನ ತಾರತಮ್ಯದ ವಿರುದ್ಧ ಹಾಗೂ ಸಾಮಾಜಿಕ ಭದ್ರತೆ ಮತ್ತು ಸುರಕ್ಷತೆಗಾಗಿ ಒತ್ತಾಯಿಸಿದರು. ಬೃಹತ್ ಹೋರಾಟಕ್ಕೆ ಮಣಿದ ಕಂಪನಿಗಳು ಪಿಎಫ್-ಇಎಸ್‌ಐ ಹಣವನ್ನು ಕಾರ್ಮಿಕರ ಖಾತೆಗಳಿಗೆ ಜಮಾ ಮಾಡುವುದಾಗಿ ಲಿಖಿತ ಭರವಸೆ ನೀಡಿತು. ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲು ಒಪ್ಪಿಕೊಂಡಿತು.

ಮಾರ್ಚ್ 14 ರಂದು ಮಧ್ಯಪ್ರದೇಶದ ಸಿಂಗ್ರೌಲಿಯಲ್ಲಿರುವ ಅದಾನಿ ಪವರ್ ಸ್ಥಾವರದಲ್ಲಿ ಕಾರ್ಮಿಕನೊಬ್ಬ ಮೃತಪಟ್ಟಿದ್ದರಿಂದ, ಸೂಕ್ತ ಪರಿಹಾರಕ್ಕಾಗಿ ನಡೆದ ಮುಷ್ಕರ ಆರಂಭಿಸಿದರು. ಆದರೆ, ಕಂಪನಿಯು ಸ್ಪಂದಿಸದಿದ್ದಾಗ, ಪ್ರತಿಭಟನೆಗಳು ಮತ್ತಷ್ಟು ತೀವ್ರಗೊಂಡವು. ಸಿಂಗ್ರೌಲಿ ಕಾರ್ಮಿಕರ ಪ್ರತಿಭಟನೆಗೆ ಛತ್ತೀಸ್‌ಗಢದ ಕೋರ್ಬಾದಲ್ಲಿದ್ದ ಅದಾನಿ ಪವರ್‌ನ 6,000 ಕಾರ್ಮಿಕರು ಹಾಗೂ ರಾಯ್‌ಗಢದ ಜಿಂದಾಲ್ ಸ್ಟೀಲ್ ಮತ್ತು ಅದಾನಿ ಪವರ್ ಕಾರ್ಮಿಕರು ಬೆಂಬಲ ಘೋಷಿಸಿ, ಮಾರ್ಚ್ 16 ಮತ್ತು 18 ರಂದು ಸಂಪೂರ್ಣ ಕೆಲಸ ಸ್ಥಗಿತಗೊಳಿಸಿ, ಧರಣಿ ನಡೆಸಿದರು.

ಆರಂಭದಲ್ಲಿ, ಆಡಳಿತವು ಕಾರ್ಮಿಕರನ್ನು ಹತ್ತಿಕ್ಕಲು ಯತ್ನಿಸಿತು. ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಪ್ರಮುಖ ಕಾರ್ಮಿಕ ಮುಖಂಡರ ಮೇಲೆ ಅತ್ಯಂತ ಕಠಿಣವಾದ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ () ಪ್ರಕರಣ ದಾಖಲಿಸಿತು. ಹಲವರನ್ನು ಸಾಮೂಹಿಕವಾಗಿ ಬಂಧಿಸಿತು. ಆದರೂ, ಕಾರ್ಮಿಕರು ಈ ಬೆದರಿಕೆಗಳಿಗೆ ಮಣಿಯದೆ ತಮ್ಮ ಒಗ್ಗಟ್ಟಿನ ಹೋರಾಟವನ್ನು ಮುಂದುವರೆಸಿದರು.

ಅಂತಿಮವಾಗಿ, ಕಂಪನಿಯು ಕಾರ್ಮಿಕರ ಎದುರು ಮಂಡಿಯೂರಿತು. ಮೃತ ಕಾರ್ಮಿಕನ ಕುಟುಂಬದ ಸದಸ್ಯರೊಬ್ಬರಿಗೆ ಸ್ಥಾವರದಲ್ಲಿ ಉದ್ಯೋಗ ನೀಡುವುದು, ಕೆಲಸದ ಸ್ಥಳದಲ್ಲಿ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದಾಗಿ ಆಡಳಿತ ಮಂಡಳಿಯು ಲಿಖಿತ ಭರವಸೆ ನೀಡಿತು.

ಹೀಗೆ, ಜನವರಿಯಿಂದ ಮಾರ್ಚ್ ಅವಧಿಯಲ್ಲೇ ದೇಶದ ಇಂಧನ ಮತ್ತು ನಿರ್ಮಾಣ ವಲಯದಲ್ಲಿ ಸುಮಾರು 28ಕ್ಕೂ ಹೆಚ್ಚು ಬೃಹತ್ ಮುಷ್ಕರಗಳು ನಡೆದಿವೆ. ಕಂಪನಿಗಳು ಮತ್ತು ಅವುಗಳ ಆಡಳಿತಗಳು ನಡುಬಗ್ಗಿಸುವಂತೆ ಮಾಡಿವೆ.

ಏಪ್ರಿಲ್ ಮೇ: ಕೈಗಾರಿಕಾ ಕಾರಿಡಾರ್‌ಗಳಲ್ಲಿ ಕಾರ್ಮಿಕ ಹೋರಾಟ ಪರ್ವ

ಮಾರ್ಚ್ ತಿಂಗಳ ಇಂಧನ ವಲಯದ ಮುಷ್ಕರಗಳ ಯಶಸ್ಸು ಏಪ್ರಿಲ್ ತಿಂಗಳಿನಲ್ಲಿ ಉತ್ತರ ಭಾರತದ ಪ್ರಮುಖ ಕೈಗಾರಿಕಾ ಹಬ್‌ಗಳಾದ ದಿಲ್ಲಿ-ಎನ್‌ಸಿಆರ್, ಮಾನೇಸರ್ ಹಾಗೂ ನೋಯ್ಡಾ ವಲಯಗಳಿಗೆ ಅತ್ಯಂತ ತೀವ್ರವಾಗಿ ಹರಡಿತು. ಏಪ್ರಿಲ್ 1 ರಂದು ಒಟ್ಟಿಗೆ ಜಾರ್ಖಂಡ್‌ನ ಎನ್‌ಟಿಪಿಸಿ ಪತ್ರಾತು, ಬಿಹಾರದ ಎನ್‌ಟಿಪಿಸಿ ನವಾನಗರ್, ಛತ್ತೀಸ್‌ಗಢದ ರಾಯ್‌ಖೇಡಾ ಅದಾನಿ ಪವರ್ ಹಾಗೂ ಪಾಣಿಪತ್ ಐಒಸಿಎಲ್‌ನಲ್ಲಿ ಹಳೆಯ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಏಕಕಾಲದಲ್ಲಿ ಮುಷ್ಕರಗಳು ಆರಂಭವಾದವು. ಇದರ ಬೆನ್ನಲ್ಲೇ, ಹರಿಯಾಣದ ಐಎಂಟಿ ಮಾನೇಸರ್ ವಲಯದ ಆಟೋಮೊಬೈಲ್ ಮತ್ತು ಗಾರ್ಮೆಂಟ್ಸ್ ಉತ್ಪಾದನಾ ಘಟಕಗಳು ಸಂಪೂರ್ಣ ಸ್ತಬ್ಧಗೊಂಡವು.

ಏಪ್ರಿಲ್ 2ರಂದು ಹೋಂಡಾ ಕಾರ್ಖಾನೆಯ ಕಾರ್ಮಿಕರು ಆರಂಭಿಸಿದ ಮುಷ್ಕರವು ಎರಡು ದಿನಗಳ ಸತತ ಹೋರಾಟದ ನಂತರ ಜಯಗಳಿಸಿತು. ಇದು ಇಡೀ ವಲಯದ ಇತರೆ ಕಾರ್ಖಾನೆಗಳ ಕಾರ್ಮಿಕರಲ್ಲಿ ಹೊಸ ಭರವಸೆ ಮೂಡಿಸಿತು. ಈ ಭರವಸೆಯೊಂದಿಗೆ, ಏಪ್ರಿಲ್ 4 ರಿಂದ 8ರ ಅವಧಿಯಲ್ಲಿ ಮುಂಜಾಲ್ ಶೋವಾ, ಸತ್ಯಂ ಆಟೋ ಕಾಂಪೊನೆಂಟ್ಸ್, ರೂಪ್ ಪಾಲಿಮರ್ಸ್, ರಿಚಾ ಗ್ಲೋಬಲ್‌ನ ವಿವಿಧ ಘಟಕಗಳು, ಮಾಡೆಲಾಮಾ ಎಕ್ಸ್‌ಪೋರ್ಟ್ಸ್, ರಿಕೋ ಆಟೋ, ಸುಪ್ರಾಜಿತ್ ಇಂಜಿನಿಯರಿಂಗ್, ಸಿರ್ಮಾ ಎಸ್‌ಜಿಎಸ್ ಟೆಕ್ನಾಲಜಿ ಹಾಗೂ ಪ್ರೆಕೋಲ್ ಲಿಮಿಟೆಡ್ ಸೇರಿದಂತೆ ಹತ್ತಾರು ಪ್ರಮುಖ ಕಾರ್ಖಾನೆಗಳ ಗುತ್ತಿಗೆ ಕಾರ್ಮಿಕರು ರಸ್ತೆಗಿಳಿದರು.

ಉತ್ತರ ಪ್ರದೇಶದ ನೋಯ್ಡಾ ಮತ್ತು ಗ್ರೇಟರ್ ನೋಯ್ಡಾ ಕೈಗಾರಿಕಾ ವಲಯಗಳಲ್ಲಿ ಏಪ್ರಿಲ್ 9 ರಿಂದ 20 ರವರೆಗೆ ಮುಷ್ಕರದ ಅಲೆ ತಾರಕಕ್ಕೇರಿತು. ರಿಚಾ ಗ್ಲೋಬಲ್, ಮದರ್‌ಸನ್, ಲಕ್ಸರ್ ಇಂಟರ್‌ನ್ಯಾಷನಲ್, ಡಿಕ್ಸನ್, ಕೆಂಟ್ ಆರ್‌ಒ, ಐಸಿಎಲ್ ಲೈಟಿಂಗ್, ಆಟೋಮೊಬೈಲ್ ಬಿಡಿಭಾಗಗಳ ದೈತ್ಯ ಸ್ಪಾರ್ಕ್ ಮಿಂಡಾ, ಬಿಪಿಎಲ್ ಹಾಗೂ ಗ್ರೇಟರ್ ನೋಯ್ಡಾದಲ್ಲಿರುವ ಪ್ರಸಿದ್ಧ ಮೊಬೈಲ್ ಉತ್ಪಾದನಾ ಸಂಸ್ಥೆ ವಿವೋ ಕಾರ್ಖಾನೆಯ ಕಾರ್ಮಿಕರು ವೇತನ ಹೆಚ್ಚಳಕ್ಕಾಗಿ ಬೃಹತ್ ಪ್ರತಿಭಟನೆಗಳನ್ನು ನಡೆಸಿದರು. ಕೇವಲ ಕೈಗಾರಿಕಾ ಕಾರ್ಮಿಕರಷ್ಟೇ ಅಲ್ಲದೆ, ಸೆಕ್ಟರ್ 43ರ ವಸತಿ ಮತ್ತು ವಾಣಿಜ್ಯ ಸಂಕೀರ್ಣಗಳ ಸೆಕ್ಯುರಿಟಿ ಗಾರ್ಡ್‌ಗಳು ಸಹ ತಮ್ಮ ಶೋಷಣೆಯ ವಿರುದ್ಧ ಧರಣಿ ಕುಳಿತರು.

ಈ ಹೋರಾಟದ ಕಿಚ್ಚು ಹರಿಯಾಣದ ಫರಿದಾಬಾದ್‌ನ ಭಾರತ್ ಗೇರ್ಸ್ ಮತ್ತು ಸಾಯಿ ಆಟೋಮೊಬೈಲ್, ಉತ್ತರಾಖಂಡದ ರುದ್ರಾಪುರದಲ್ಲಿರುವ ವಾರೋಕ್ ಇಂಜಿನಿಯರಿಂಗ್, ಯಾಜಾಕಿ ಆಟೋಮೋಟಿವ್, ಹರಿದ್ವಾರದ ಪ್ರಮುಖ ಫಾರ್ಮಾಸ್ಯುಟಿಕಲ್ಸ್ ಕಂಪನಿಗಳು ಹಾಗೂ ಡೆಹ್ರಾಡೂನ್‌ನ ಡಿಕ್ಸನ್ ಫಾರ್ಮಾ ಸಂಸ್ಥೆಗಳಿಗೆ ವ್ಯಾಪಿಸಿತು. ರಾಜಸ್ಥಾನದ ಅಲ್ವಾರ್ ಜಿಲ್ಲೆಯ ಭಿವಾಡಿ, ನೀಮ್ರಾನಾ ಹಾಗೂ ತಪುಕರ ಕೈಗಾರಿಕಾ ಪ್ರದೇಶಗಳ ನೂರಾರು ಸಣ್ಣ ಮತ್ತು ಬೃಹತ್ ಉತ್ಪಾದನಾ ಘಟಕಗಳ ಕಾರ್ಮಿಕರು ಈ ಬೃಹತ್ ದಂಗೆಯ ಭಾಗವಾದರು.

ಈ ಎಲ್ಲ ಪ್ರತಿಭಟನೆಗಳು ಬಹುತೇಕ ಯಶಸ್ವಿಯಾದವು. ಕೆಲಸದ ಸಮಯ, ಓವರ್‌ಟೈಮ್‌ಗೆ ದುಪ್ಪಟ್ಟು ವೇತನ, ಸುರಕ್ಷತಾ ಕ್ರಮಗಳ ಅನುಸರಣೆಗೆ ಕಂಪನಿಗಳು ಒಪ್ಪಿಕೊಂಡವು. ಹೋರಾಟದ ಮತ್ತೊಂದು ಮೈಲಿಗಲ್ಲಾಗಿ, ಹರಿಯಾಣದಲ್ಲಿ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಹೆಚ್ಚಿಸಬೇಕೆಂದು ಕಂಪನಿಗಳಿಗೆ ಕಡ್ಡಾಯ ಆದೇಶವನ್ನು ಹರಿಯಾಣ ಸರ್ಕಾರ ಹೊರಡಿಸಿತು.

ಕಾರ್ಮಿಕ ಮುಷ್ಕರದ ಅಲೆ ಮತ್ತು ಗಮನಿಸಬೇಕಾದ ಅಂಶಗಳು

ಈ ಮೂರು ತಿಂಗಳ ನಿರಂತರ ಹೋರಾಟಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಈ ಹೋರಾಟಗಳು ಭಾರತೀಯ ಕಾರ್ಮಿಕ ಚಳುವಳಿಯ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ, ಹೊಸ ಅಲೆಯನ್ನು ಸೃಷ್ಟಿಸಿವೆ. ಈ ಮುಷ್ಕರಗಳಲ್ಲಿ ಗಮನಿಸಬೇಕಾದ ಕೆಲ ಅಂಶಗಳೂ ಇವೆ.

1. ಗುತ್ತಿಗೆ ಕಾರ್ಮಿಕರೇ ಮುಖ್ಯ ಶಕ್ತಿ: ಇಡೀ ಚಳುವಳಿಯ ಅತ್ಯಂತ ಗಮನಾರ್ಹ ಅಂಶವೆಂದರೆ, ಎಲ್ಲ ಮುಷ್ಕರಗಳ ಮುಂಚೂಣಿಯಲ್ಲಿ ಮತ್ತು ತಳಮಟ್ಟದಲ್ಲಿ ನಿಂತವರು ಗುತ್ತಿಗೆ ಕಾರ್ಮಿಕರು. ಖಾಯಂ ನೌಕರರಿಗೆ ಸಿಗುವ ಯಾವುದೇ ಸೌಲಭ್ಯಗಳಿಲ್ಲದೆ, ಕನಿಷ್ಠ ವೇತನವಿಲ್ಲದೆ ಮತ್ತು ಹೆಚ್ಚಿನ ಶೋಷಣೆಗೆ ಒಳಗಾಗುವ ಈ ಕಾರ್ಮಿಕರು ಯಾವುದೇ ಅಧಿಕೃತ ಯೂನಿಯನ್‌ಗಳಿಗಾಗಿ ಕಾಯದೆ, ತಾವಾಗಿಯೇ ಸ್ವಯಂಪ್ರೇರಿತರಾಗಿ ರಸ್ತೆಗಿಳಿದಿದ್ದರು. ಆಶ್ಚರ್ಯಕರವಾಗಿ, ಈ ಹೋರಾಟಗಳಿಂದ ಬಹುತೇಕ ಕಾರ್ಖಾನೆಗಳ ಖಾಯಂ ನೌಕರರು ಮತ್ತು ಒಕ್ಕೂಟಗಳು ಸಂಪೂರ್ಣವಾಗಿ ದೂರ ಉಳಿದಿದ್ದವು ಅಥವಾ ತಟಸ್ಥವಾಗಿದ್ದವು.

2. ಕೇಂದ್ರ ಕಾರ್ಮಿಕ ಸಂಘಟನೆಗಳ ನಿಷ್ಕ್ರಿಯತೆ: ದೇಶದ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳ ಒಕ್ಕೂಟಗಳು (ಟ್ರೇಡ್ ಯೂನಿಯನ್) ತಳಮಟ್ಟದಲ್ಲಿ ಹಠಾತ್ತನೆ ಭುಗಿಲೆದ್ದ ಈ ಸ್ವಯಂಪ್ರೇರಿತ ಹೋರಾಟಗಳನ್ನು ಕಂಡು ದಿಗ್ಭ್ರಮೆಗೊಂಡವು. ಕಾರ್ಮಿಕರು ಬೀದಿಗೆ ಬಂದು ಹೋರಾಡುತ್ತಿದ್ದಾಗ ಈ ಸಂಘಟನೆಗಳು ಕೇವಲ ಮೌಖಿಕ ಬೆಂಬಲದ ಹೇಳಿಕೆಗಳನ್ನು ನೀಡುವುದಕ್ಕೆ ಸೀಮಿತವಾದವು. ಇದು ಭಾರತದಲ್ಲಿ ಸಾಂಪ್ರದಾಯಿಕ ಯೂನಿಯನ್‌ಗಳ ಮುಖಂಡತ್ವ ಕುಸಿಯುತ್ತಿರುವುದನ್ನು ತೋರಿಸುತ್ತದೆ.

3. ದಮನಕಾರಿ ಕ್ರಮಗಳ ನಡುವೆಯೂ ಮುಂದುವರಿದ ಹೋರಾಟ: ಮಾನೇಸರ್, ನೋಯ್ಡಾ ಮತ್ತು ಪಾಣಿಪತ್‌ಗಳಲ್ಲಿ ಆಡಳಿತ ಮಂಡಳಿಗಳು ಮತ್ತು ಪೊಲೀಸರು ಕಾರ್ಮಿಕರ ಧ್ವನಿಯನ್ನು ಅಡಗಿಸಲು ತೀವ್ರ ದಮನಕಾರಿ ನೀತಿಗಳನ್ನು ಬಳಸಿದರು. ಕಾರ್ಮಿಕ ಮುಖಂಡರ ಮೇಲೆ ಕೊಲೆ ಯತ್ನದಂತಹ ಗಂಭೀರ ಪ್ರಕರಣಗಳನ್ನು ದಾಖಲಿಸುವುದು, ಸಾಮೂಹಿಕ ಬಂಧನ ಮಾಡುವುದು ಹಾಗೂ ಕೆಲವು ಕಡೆಗಳಲ್ಲಿ ರಾಷ್ಟ್ರೀಯ ಭದ್ರತಾ ಕಾಯ್ದೆಯಂತಹ () ಅತ್ಯಂತ ಕಠಿಣ ಕಾನೂನುಗಳನ್ನು ಪ್ರಯೋಗಿಸಿದ ಹೊರತಾಗಿಯೂ, ಈ ಕಾರ್ಮಿಕರ ಒಗ್ಗಟ್ಟು ಕುಗ್ಗದೆ ದಿನದಿಂದ ದಿನಕ್ಕೆ ಇನ್ನೂ ಹಲವು ಕೈಗಾರಿಕಾ ವಲಯಗಳಿಗೆ ವಿಸ್ತರಿಸುತ್ತಲೇ ಸಾಗಿತು. ಈಗಲೂ ಸಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ; ಭಾರತ ಸರ್ಕಾರವು ಜಾರಿಗೆ ತರಲು ಉದ್ದೇಶಿಸಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು ಸಂಘಟಿತ ವಲಯದ ಕಾರ್ಮಿಕರ ಮುಷ್ಕರದ ಹಕ್ಕುಗಳನ್ನು ಮತ್ತು ಕಾನೂನಾತ್ಮಕ ರಕ್ಷಣೆಯನ್ನು ಗಮನಾರ್ಹವಾಗಿ ಮೊಟಕುಗೊಳಿಸುತ್ತವೆ ಎಂಬ ಆತಂಕ ಕಾರ್ಮಿಕ ವಲಯದಲ್ಲಿದೆ. ಈ ನೀತಿಗಳಿಗೆ ತಳಮಟ್ಟದ ಕಾರ್ಮಿಕ ವರ್ಗವು, ವಿಶೇಷವಾಗಿ ವಲಸೆ ಮತ್ತು ಗುತ್ತಿಗೆ ಕಾರ್ಮಿಕರು ಮುಷ್ಕರಗಳ ಮೂಲಕವೇ ತಮ್ಮ ಪ್ರಬಲ ಪ್ರತಿರೋಧ ನೀಡುತ್ತಿದ್ದಾರೆ. ಈ ನಿರಂತರ ಹೋರಾಟಗಳ ತೀವ್ರತೆಗೆ ಮಣಿದು ಈಗಾಗಲೇ ದೇಶದ ಮೂರು ಪ್ರಮುಖ ರಾಜ್ಯ ಸರ್ಕಾರಗಳು ಹರಿಯಾಣ, ಮಧ್ಯಪ್ರದೇಶ, ರಾಜಸ್ಥಾನ ತಮ್ಮ ರಾಜ್ಯಗಳಲ್ಲಿ ಕನಿಷ್ಠ ವೇತನವನ್ನು ಅಧಿಕೃತವಾಗಿ ಹೆಚ್ಚಿಸಬೇಕಾದ ಅನಿವಾರ್ಯತೆಗೆ ಸಿಲುಕಿವೆ.

ಗಮನಾರ್ಹವಾಗಿ, ಹೋರಾಟ ಇಲ್ಲಿಗೇ ಮುಗಿದಿಲ್ಲ. ಕಾಗದದ ಮೇಲೆ ಘೋಷಣೆಯಾಗಿರುವ ಈ ಹೆಚ್ಚುವರಿ ವೇತನ ಮತ್ತು ಸೌಲಭ್ಯಗಳನ್ನು ಪ್ರತಿಯೊಂದು ಕಾರ್ಖಾನೆಯ ಮಾಲೀಕರು ಮತ್ತು ಗುತ್ತಿಗೆದಾರರು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಮಾಡಬೇಕಿದೆ. ಅದಕ್ಕಾಗಿ, ಕಾರ್ಮಿಕರು ನಿರಂತರ ಹೋರಾಟಗಳನ್ನು ನಡೆಸಲೇಬೇಕಿದೆ. ವಲಸೆ ಕಾರ್ಮಿಕರ ಒಕ್ಕೂಟಗಳು ಮತ್ತು ತಳಮಟ್ಟದ ಕಾರ್ಯಕರ್ತರ ವರದಿಗಳ ಪ್ರಕಾರ, ಈ ಮೂರು ತಿಂಗಳ ಅವಧಿಯು ಭಾರತದ ಶ್ರಮಿಕ ವರ್ಗದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆದಿದೆ. ಭವಿಷ್ಯದ ಉದ್ಯೋಗದ ಹಕ್ಕುಗಳು ಮತ್ತು ಕೈಗಾರಿಕಾ ಸಂಬಂಧಗಳನ್ನು ನಿರ್ಧರಿಸುವಲ್ಲಿ ಇದು ಅತ್ಯಂತ ಪ್ರಮುಖ ಪಾತ್ರ ವಹಿಸಲಿದೆ. ಇದರಲ್ಲಿ, ಯಾವುದೇ ಅನುಮಾನಗಳಿಲ್ಲ!

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR